Budget Estimates for 1978–79 Demands for Grants

Demand Nos. 21 and 58 (Debate Continued)

† ಶ್ರೀ ಆರ್. ಎಸ್. ಪಾಟೀಲ್ (ಕಾರ್ಮಿಕ ಹಾಗೂ ಅಬ್ಕಾರಿ ಖಾತೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಮತ್ತು ಅಬ್ಕಾರಿ ಇಲಾಖೆಯ ಬಗ್ಗೆ ನಿನ್ನೆಯಿಂದ ನಡೆದ ಚರ್ಚೆಗೆ ಉತ್ತರವನ್ನು ಕೊಡುವುದಕ್ಕಿಂತ ಮೊದಲು ಒಂದು ವಿಷಯವನ್ನು ಹೇಳಬೇಕಾಗಿದೆ. ಒಂದೆರಡು ದಿವಸಗಳಿಂದ ನಡೆದ ಒಂದು ಘಟನೆ ಬಗ್ಗೆ ನನ್ನ ಮೇಲೆ ಹೇಳಿದ್ದು ನನಗೆ ಒಂದು ತರಹ ಸಿಟ್ಟು ಆಯಿತು. ಅದು ವಿಷಾದ ವೆನಿಸುತ್ತಿದೆ. ಕಾರಣವೇನೆಂದರೆ, ಈ ಮನೆಯ ಸದಸ್ಯ ಮಿತ್ರರು ಹಾಗೂ ಮೇಲ್ಮನೆಯ ಕೆಲವು ಮಿತ್ರರು ನನ್ನನ್ನು ಕೇಳಿದರು. ಏನೆಂದರೆ, ಮಾನ್ಯ ಪಶುಸಂಗೋಪನಾ ಹಾಗೂ ಡೈರಿ ಅಭಿವೃದ್ಧಿ ಮಂತ್ರಿಗಳು ನಮ್ಮನ್ನು ಡೈರಿಗೆ ಕರೆದುಕೊಂಡು ಹೋಗಿ ಎಲ್ಲವನ್ನೂ ತೋರಿಸಿದರು, ಹಾಲು ಕುಡಿಸಿ ದರು. ಹೆಸರಘಟ್ಟ ಫಾರಮ್ಮಿಗೆ ಕರೆದುಕೊಂಡು ಹೋದರು, ಅಲ್ಲಿ ಎಲ್ಲವನ್ನೂ ತೋರಿಸಿದರು, ನೀವು ಲೇಬರ್ ಅಂಡ್ ಎಕ್ಸೈಜ್ ಮಂತ್ರಿಗಳು ನಮಗೆ ಏನೂ ತೋರಿಸಲಿಲ್ಲ ಎಂದು ಹೇಳಿದರು. ನಾನು ಇವರಿಗೆ ಏನು ತೋರಿಸಲಿ, ಏನುಕುಡಿಸಲಿ ಎಂದು ನನ್ನ ಅಸಾಯಕತೆಯ ಮೇಲೆ ನನಗೇ ಕೋಪ ಬಂತು. ಒಂದುವೇಳೆ ಕಾರ್ಮಿಕರ ಕಡೆಗೆ ಕರೆದುಕೊಂಡು ಹೋಗೋಣವೆಂದರೆ ಈ ಅವಧಿಯಲ್ಲಿ ಕಾರ್ಮಿಕರು ವಿಧಾನಸೌಧಕ್ಕೆ ಯಾರೂ ಪ್ರೊಸೆಷನ್ ಬರಲಿಲ್ಲ, ಆದುದರಿಂದ ನನ್ನ ಮಿತ್ರರನ್ನು ಕರೆದುಕೊಂಡು ಹೋಗಲಿಕ್ಕೆ ಆಗಲಿಲ್ಲ. ಮತ್ತು ಅವರ ದುಗುಡ, ಅವರ ಸಮಸ್ಯೆಗಳು ಏನು ಎನ್ನುವುದನ್ನು ಇವರಿಗೆ ಅರ್ಥಮಾಡಿಸಿಕೊಡುವಂಥ ಅವಕಾಶ ಕೂಡ ನನಗೆ ಬರಲಿಲ್ಲ. ನನ್ನ ಮಿತ್ರರು ಹೇಳುವಂತೆ ಈ ಇಲಾಖೆ ಬಹಳ ಚಿಕ್ಕದಾದ ಇಲಾಖೆ. ಆದರೆ ನಿರ್ವಹಿಸತಕ್ಕ ಜವಾಬ್ದಾರಿ ಬಹಳ ದೊಡ್ಡದು. ಕೇಂದ್ರ ಮತ್ತು ರಾಜ್ಯದ ಸುಮಾರು ೨೯ ಕಾನೂನುಗಳನ್ನು ಜಾರಿಗೆ ಕೊಡುವಂಥ ಹೊಣೆ ಈ ಸಣ್ಣ ಇಲಾಖೆಯದು. ಕಾರ್ಮಿಕರ ಹಿತರಕ್ಷಣೆಯನ್ನು ಮಾಡತಕ್ಕಂಥ ಹೊಣೆ ಈ ಇಲಾಖೆಯದು. ಇದರ ಬಗ್ಗೆ ಚಿಂತೆ ಬೇಡ "ಯೋಗಕ್ಷೇಮಂ ವಹಾಮ್ಯಹಂ" ಎಂದು ಹೇಳತಕ್ಕ ಇಲಾಖೆ ಈ ಇಲಾಖೆ. ಮಾನ್ಯ ಮಿತ್ರರಾದ ಫರ್ನಾಂಡಿಸ್ ಅವರು ಹಾಗೂ ಇತರ ಮಿತ್ರರು ಮಾತನಾಡುವಾಗ ಬರೀ ನೆಗೆಟೀವ್ ಆಸ್‌ಪೆಕ್ಟ್ಸ್ ಮಾತ್ರ ಹೇಳಿದರು, ಅದು ಆಗಲಿಲ್ಲ, ಇದು ಆಗಲಿಲ್ಲ, ಅದು ಆಗಬೇಕಾಗಿತ್ತು, ಇದು ಆಗಬೇಕಾಗಿತ್ತು ಎಂದು ಹೇಳಿದರು.

ಪಾಸಿಟೀವ್ ಆಸ್ಪೆಕ್ಟ್ಸನ್ನು ಒಬ್ಬರೂ ಕೂಡ ಟಚ್ ಮಾಡಲೇ ಇಲ್ಲ. ಈ ಇಲಾಖೆ ಒಂದು ವರ್ಷದಲ್ಲಿ ಸಾಧಿಸಿದಂಥ ಪ್ರಗತಿ ಸಾಧನೆ ಬಗ್ಗೆ ಒಂದು ಮಾತನ್ನೂ ಮಾನ್ಯ ಫರ್ನಾಂಡಿಸ್ ಅವರು ಹೇಳ ಲಿಲ್ಲ.

ಕೆಲವು ದಿವಸಗಳ ಹಿಂದೆ ಬೆಂಗಳೂರಿನಲ್ಲಿದ್ದಂಥ ಪಬ್ಲಿಕ್ ಅಂಡರ್ ಟೇಕಿಂಗ್ ಇಂಡಸ್ಟ್ರೀಸ್ ಮುಷ್ಕರದ ಗಂಟೆಯನ್ನು ಬಾರಿಸಿದರು. ಅತ್ತಕಡೆ ತಮ್ಮ ಗಮನವನ್ನು ಹರಿಸಿದರೆ ಗೊತ್ತಾಗುತ್ತದೆ. ಜಾಯಿಂಟ್ ಆಕ್ಷನ್ ಕಮಿಟಿ ಮಾಡಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮೇ ೨೩–೨೪–೨೫—ಈ ಮೂರು ದಿವಸ ಸತತವಾಗಿ ಸಂಧಾನದ ಪ್ರಯತ್ನಮಾಡಿ ೨೪ನೇ ತಾರೀಖಿನ ದಿವಸ ೧೭ ಗಂಟೆ ಅವಿರತವಾಗಿ ಮೀಟಿಂಗ್ ಮಾಡಿ ಬೆಳಿಗ್ಗೆ ೪½ ಗಂಟೆಗೆ ಒಂದು ಒಪ್ಪಂದಕ್ಕೆ ಸಹಿ ಆಯಿತು ಮಾನ್ಯ ಫರ್ನಾಂಡಿಸ್ ಅವರು ಕೂಡ ಸಹಿ ಮಾಡಿದ್ದಾರೆ. ಇವರಿಂದ ಕೂಡ ಒಂದು ಮೆಚ್ಚುಗೆಯ ಮಾತು ಬರಲಿಲ್ಲವಲ್ಲ ಎಂದು ನನಗೆ ವಿಷಾದವೆನಿಸುತ್ತದೆ. ದೇಶದಲ್ಲಿರತಕ್ಕ ನಾಯಕರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ರಾಜ್ಯಪಾಲರು ಮೆಚ್ಚುಗೆಯನ್ನು ವ್ಯಕ್ತಪಡಿಸಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ನಿಮ್ಮ ಇಲಾಖೆಯ ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗಕ್ಕೆ ತಿಳಿಸಿರಿ ಎಂದು ಪತ್ರವನ್ನು ಕೂಡ ಬರೆದಿದ್ದಾರೆ. ಇಂಥಾದ್ದರಲ್ಲಿ ಮಾನ್ಯ ಮೈಕೇಲ್ ಫರ್ನಾಂಡಿಸ್ ಅವರು ಒಂದು ಮೆಚ್ಚುಗೆಯ ಮಾತನ್ನೂ ಕೂಡ ಆಡಲಿಲ್ಲವಲ್ಲ ಎಂದು ನನಗೆ ವಿಷಾದವಾಗುತ್ತಿದೆ. ಮಾನ್ಯ ಮೈಕೇಲ್ ಫರ್ನಾಂಡಿಸ್ ಅವರು ಒಳ್ಳೆಯ ಕಾರ್ಮಿಕ ನಾಯಕರು. ನನ್ನ ಒಂದು ವ್ಯಸನ ಏನೆಂದರೆ, ಮೈಕೇಲ್ ಫರ್ನಾಂಡಿಸ್ ಅವರನ್ನು ಜಾರ್ಜ್ ಫರ್ನಾಂಡಿಸ್ ಅವರ ತಮ್ಮ ಎಂದು ಕರೆಯುವುದು ಬೇಡ, ಅವರ ಅಣ್ಣ ಎಂದು ಹೇಳುವಂಥ ಮಟ್ಟಕ್ಕೆ ಹೋಗಬೇಕು ಎನ್ನುವುದು ನನ್ನ ಭಾವನೆ. ಈ ಒಂದು ಒಪ್ಪಂದವಾಗಿ ಸಹಿ ಏನು ಆಗಿದೆ ಇದು ನಮ್ಮ ಇಲಾಖೆ ಸಾಧಿಸಿದ ಪ್ರಗತಿಯಾಗಿದೆ ಮತ್ತು ಇಡೀ ಕಾರ್ಮಿಕ ಇಲಾಖೆಯ ಇತಿಹಾಸದಲ್ಲೇ ದೊಡ್ಡದಾದ ಸಾಧನೆಯನ್ನು ಮಾಡಿದೆ. ಇದು ಪ್ರಶಂಸನೀಯವಾದುದು

ಎಂದು ನಾನು ಅಂದುಕೊಂಡಿದ್ದೇನೆ. ಇದನ್ನು ಹೊರತುಪಡಿಸಿ ನಮ್ಮ ಇಲಾಖೆಯುವರು ೩೭ ದೊಡ್ಡ ಕೈಗಾರಿಕೆಗಳಲ್ಲಿ ಒಪ್ಪಂದವನ್ನು ಸಾಧಿಸಿದ್ದಾರೆ ಅದು ಒಂದು ಹೆಮ್ಮೆಯ ಸಾಧನೆ. ಕೆ.ಇ.ಬಿ.ಯಲ್ಲಿ ಒಪ್ಪಂದವನ್ನು ಸಾಧಿಸಿ ಸಾವಿರಾರು ಜನ ಕಾರ್ಮಿಕರಿಗೆ ನೆಮ್ಮದಿಯನ್ನು ತಂದುಕೊಟ್ಟಿದ್ದಾರೆ. ಕಾರ್ಮಿಕರು ಮತ್ತು ಪ್ಲಾಂಟರ್ಸ್ ಅಸೋಸಿಯೇಷನ್‌ನವರಲ್ಲಿ ಇಂಡಸ್ಟ್ರೀವೈಸ್ ಒಪ್ಪಂದವನ್ನು ಮಾಡಿ ಸುಮಾರು ೮೫ ಸಾವಿರ ಕಾರ್ಮಿಕರ ಶಾಂತಿಪಾಲನಾ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ ಇದು ಹೆಮ್ಮೆಯ ಮಾತಲ್ಲವೇ. ಈ ವರ್ಷದಲ್ಲಿ ನಾವು ಸಾಧಿಸಿದ ಕಾರ್ಯಕ್ರಮಗಳಿಂದ ಹೆಮ್ಮೆಪಟ್ಟುಕೊಳ್ಳುವುದರಲ್ಲಿ ಏಕೆ ಅತ್ಯಂಕ ಎಂದು ನಾನು ಕೇಳುತ್ತೇನೆ, ಮಾನ್ಯ ಸದಸ್ಯರು ಈ ಇಲಾಖೆಯಲ್ಲಿ ಕೆಲಸ ಆಗಿಲ್ಲ ಎಂದು ಯಾವ ಆಧಾರದ ಮೇಲೆ ಹೇಳಿದರೋ ನನಗಂತೂ ಅರ್ಥವಾಗಲಿಲ್ಲ. ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ೫೦ ಸಾವಿರ ಕಾರ್ಮಿಕರನ್ನು ಹೊಂದಿದೆ. ತ್ರಿಪಕ್ಷೀಯ ವರದಿಯನ್ನು ನಾವು ಒಪ್ಪಿಕೊಂಡು ನೋಟಿಫೈ ಮಾಡಿದಾಗ ಆ ಕೈಗಾರಿಕೆಯಲ್ಲಿ ನೆಮ್ಮದಿ ಉಂಟಾಯಿತು, ಇದು ಹೆಮ್ಮೆಯ ಸಾಧನೆಯಲ್ಲವೇ. ಇವೆಲ್ಲವನ್ನೂ ಹಿನ್ನೆಲೆಯಾಗಿಟ್ಟುಕೊಂಡು ತಾನು ಸಾಧಿಸಿದ ಪ್ರಗತಿಯನ್ನು ಹೇಳುವಾಗ, ನಮ್ಮ ಇಲಾಖೆಯ ಸಿಬ್ಬಂದಿ ವರ್ಗದವರು ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನೊಂದು ವಿಷಯ ವೇನೆಂದರೆ, ಮಿನಿಮಂ ವೇಜಸ್ ಆಕ್ಟ್ ವಿಷಯದಲ್ಲಿ ಹಲವಾರು ಮಿತ್ರರು ಮಾತನಾಡಿದ್ದಾರೆ. ಆ ಕಾಯಿದೆಗನುಗುಣವಾಗಿ ಕನಿಷ್ಠ ವೇತನವನ್ನು ನಿಗದಿ ಮಾಡುವ, ಪುನರ್ವ್ಯವಸ್ಥೆ ಮಾಡುವ ಅಧಿಕಾರ ಸರ್ಕಾರಕ್ಕಿದೆ. ಈ ಆಕ್ಟ್‌ನ ಷೆಡ್ಯೂಲಿನಲ್ಲಿ ಸುಮಾರು ೪೫೦೦೦ ಎಂಪ್ಲಾಯೀಸ್ ಇದ್ದಾರೆ. ಇವೆಲ್ಲವುಗಳಿಗೆ ವೇತನವನ್ನು ನಿಗದಿಮಾಡಲಾಗಿದೆ, ಪುನರ್ವಿಮರ್ಶೆ ಮಾಡಲಾಗಿದೆ ಅಥವಾ ನೋಟಿಫೈ ಮಾಡಿ ಅಬ್ಜಕ್ಷನ್‌ನ್ನು ಕರೆಯಲಾಗಿದೆ, ಇದು ಒಂದು ದೊಡ್ಡ ಪಟ್ಟಿಯಾಗಿರುವುದರಿಂದ ಸಮಯದ ಅಭಾವ ಇರುವುದರಿಂದ ಅದರ ವಿವರಣೆಗಳನ್ನು ಕೊಡಲಿಚ್ಛಿಸುವುದಿಲ್ಲ, ಅದನ್ನು ಮಾನ್ಯ ಸದಸ್ಯರ ಅವಗಾಹನೆಗಾಗಿ ಸಭೆಯ ಮುಂದೆ ಇಡಬಯಸುತ್ತೇನೆ. ಸಮಯದ ಅಭಾವವಿರುವುದರಿಂದ ಇಷ್ಟನ್ನು ಹೇಳಿ, ಇನ್ನು ಮಾನ್ಯ ಮಿತ್ರರು ಹೇಳಿದ ವಿಷಯಗಳ ಕಡೆಗೆ ಹೋಗಲಿಚ್ಛಿಸುತ್ತೇನೆ. ಮಾನ್ಯ ಸದಸ್ಯರು ಸರ್ಕಾರಿ ಆಡಳಿತ ವರ್ಗಕ್ಕೆ ಕಾರ್ಮಿಕ ವರ್ಗದ ಮೇಲೆ ನಂಬಿಕೆ ಇಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದಕ್ಕೆ ಏನು ಆಧಾರ ಎನ್ನುವುದನ್ನು ಅವರು ಹೇಳಲಿಲ್ಲ. ಸ್ವಾಮಿ, ಈ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯನ್ನು ಹಿಂದೆ ಸಮರ್ಥವಾಗಿ ನಡೆಸಿದಂಥ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಅಜೀಜ್ ಸೇಠ್ ಅವರು ಹಾಗೂ ಮಾನ್ಯ ಯಾಹ್ಯಾರವರಂಥ ಸಮರ್ಥ ನಾಯಕರ ಬೆಂಬಲವಿರುವಾಗ ಇವರಿಗೆ ಅಪನಂಬಿಕೆಯ ಮಾತು ಯಾವ ರೀತಿ ಬಂತು ಎಂದು ನನಗೆ ಅರ್ಥವಾಗಲಿಲ್ಲ. ಅದಕ್ಕೆ ಕಾರಣವನ್ನು ಅವರು ಕೊಡಬೇಕಾಗಿತ್ತು. ನಾವೆಲ್ಲರೂ ಕಾರ್ಮಿಕರ ಹಿತರಕ್ಷಣೆಯನ್ನು ಮಾಡಲು ತಯಾರಿರುವಾಗ, ಯಾವ ಕಾರ್ಯ ವಿಳಂಬವಾಯಿತು, ಯಾವುದರಲ್ಲಿ ಅಪನಂಬಿಕೆ ಆಗಿದೆ ಎಂದು ಹೇಳಿದ್ದರೆ ಬಹುಶಃ ನಾನು ಒಪ್ಪುತ್ತಿದ್ದೆ. ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಅವುಗಳಿಗೆ ಒಂದೊಂದಾಗಿ ನಾನು ಉತ್ತರವನ್ನು ಕೊಡಲಿಚ್ಛಿಸುತ್ತೇನೆ ಶ್ರೀಮಾನ್ ಫರ್ನಾಂಡಿಸ್ ಅವರು ತುರ್ತುಪರಿಸ್ಥಿತಿಯಲ್ಲಿ ಕೆಲವು ನೌಕರರನ್ನು ತೆಗೆದುಹಾಕಿದ್ದಾರೆ, ಅವರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ವಿಷಯವಾಗಿ ನಾನು ಸರ್ಕಾರದಿಂದ ಎಲ್ಲಾ ಉದ್ಯಮಿಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಅವರೆಲ್ಲರನ್ನೂ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇನೆ. ಕಾರ್ಮಿಕ ಇಲಾಖೆಯ ಸಿಬ್ಬಂದಿವರ್ಗ ಸಾಲದು, ಅದಕ್ಕಾಗಿ ಹೆಚ್ಚು ಲೇಬರ್ ಇನ್‌ಸ್ಪೆಕರ್ ಮತ್ತು ಲೇಬರ್ ಆಫೀಸರುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಸೂಚನೆಯನ್ನು ಕೂಡ ಮಾಡಿದ್ದಾರೆ, ಈ ಸೂಚನೆ ಮಹತ್ವವಾದುದು ಅದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಜಿಲ್ಲೆಗೆ ಒಬ್ಬನಾದರೂ ಲೇಬರ್ ಆಫೀಸರ್, ತಾಲ್ಲೂಕಿಗೆ ಒಬ್ಬನಾದರೂ ಲೇಬರ್ ಇನ್‌ಸ್ಪೆಕ್ಟರ್ ಇರಬೇಕು ಎಂದು ಮಾಡಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪನವರು (ಅಧ್ಯಕ್ಷ ಪೀಠವನ್ನಲಂಕರಿಸಿದರು).

ಬೆಂಗಳೂರಿನಲ್ಲಿ ೪ ಜನ ಲೇಬರ್ ಆಫೀಸರ್, ೧೯ ಜನ ಲೇಬರ್ ಇನ್‌ಸ್ಪೆಕ್ಟರ್‌ಗಳನ್ನು ಹಾಕಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಚೆಕ್ ಸಿಸ್ಟಂ ವಿಷಯವಾಗಿ ಹೇಳಿದರು. ಈಗ ಚೆಕ್ ಸಿಸ್ಟಂ ಇಂಟ್ರಡ್ಯೂಸ್ ಮಾಡಬೇಕು ಎನ್ನುವಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಪೇಮೆಂಟ್ ಆಫ್ ವೇಜಸ್ ಆಕ್ಟ್‌ನಲ್ಲಿ ರೆಲವೆಂಟ್ ಪೋರ್ಷನ್ ಓದಿದರೆ ಮಾನ್ಯ ದದಸ್ಯರಿಗೆ ಅರ್ಥವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅದು ಈ ರೀತಿ ಇದೆ :

"All wages shall be paid in current coin or currency notes or in both :

Provided the employer, may after obtaining the written authorisation of the employee pay him the wages in cheque or credit the same in the Bank." ಎಂದು

ಇವರು ಮಾಡದೇ ಹೋದರೂ ಕೂಡ ನಾವು ಎಂಪ್ಲಾಯರ್ ಮನವೊಲಿಸಿ ಆದಷ್ಟು ಚೆಕ್ ಮುಖಾಂತರ ವೇತನವನ್ನು ಕೊಟ್ಟರೆ ಸರಿಯಾಗುತ್ತದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತಾ ಇದ್ದೇನೆ.

ತಮಗೆ ಲೇಬರ್ ಕೋರ್ಟ್ ವಿಚಾರ ಹೇಳುತ್ತೇನೆ. ಅದರಲ್ಲಿ ಒಂದು ಹೊಸ ಟೆಂಡೆನ್ಸಿ ಇದೆ, ಅದನ್ನು ಕೂಡ ಗಮನಕ್ಕೆ ತೆಗೆದುಕೊಂಡು ನಾವು ಈಗಾಗಲೇ ಮೈಸೂರಿನಲ್ಲಿ ಒಂದು, ಮರ್ಕೆರಾದಲ್ಲಿ ಒಂದು ಕೋರ್ಟನ್ನು ತೆರೆದಿದ್ದೇವೆ ಮತ್ತೆ ಹೊಸದಾಗಿ ಎಷ್ಟೇ ಕೋರ್ಟ್‌ಗಳನ್ನು ತೆರೆಯಬೇಕಾದ ಸಂದರ್ಭ ಬಂದಾಗ ಆ ಕೋರ್ಟ್‌ಗಳನ್ನು ತೆರೆಯುವುದಕ್ಕೆ ಕಾಲ ವಿಳಂಬ ಮಾಡದೇ ತೆರೆಯುತ್ತೇವೆ, ಹಿಂದುಮುಂದು ನೋಡುವುದಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರು ಹೇಳಿದರು ಕನ್‌ಸಿಲಿಯೇಷನ್ ಮೀಟಿಂಗ್‌ಗೆ ಮ್ಯಾನೇಜ್‌ಮೆಂಟಿನವರು ಹಾಜರಾಗುವುದಿಲ್ಲವೆಂದು, ಆದರೆ ಅವರು ಕಂಪಲ್ಸರಿಯಾಗಿ ಹಾಜರಾಗಬೇಕು ಎನ್ನುವ ಬಗ್ಗೆ ಕಾನೂನು ಇಲ್ಲವೆನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಅದಕ್ಕೆ ಈ ವಿಷಯದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳವರು ಡೆಲ್ಲಿಗೆ ಲೇಬರ್ ಮಿನಿಸ್ಟರ್ ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ಈ ಅಂಶವನ್ನು ಎತ್ತಿ ತೋರಿಸಿದ್ದಾರೆ. ಅದನ್ನು ಕಂಪಲ್‌ಸರಿ ಮಾಡಬೇಕು ಎನ್ನುವ ಅಂಶವನ್ನು ಅವರು ಕೇಂದ್ರ ಸರ್ಕಾರದವರ ಗಮನಕ್ಕೂ ತಂದಿದ್ದಾರೆ ಏತಕ್ಕೆಂದರೆ ಅದು ಕೇಂದ್ರಕ್ಕೆ ಸಂಬಂಧಪಟ್ಟದ್ದು, ಅದಕ್ಕೋಸ್ಕರ ನಾವು ಅವರ ಅನುಮತಿಗೋಸ್ಕರ ಕಾಯಬೇಕಾಗಿದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಇನ್ನು ಎಸ್.ಕೆ.ಎಫ್. ವಿಷಯವಾಗಿ ಮಾತನಾಡುತ್ತಾ ಮಾನ್ಯ ಸದಸ್ಯರು ಹೇಳಿದರು. ನಾವು ಅಲ್ಲಿದ್ದಂಥ ಲಾಕ್‌ಔಟನ್ನು ಪ್ರೊಹಿಬಿಟ್ ಮಾಡಿದ್ದೇವೆ, ಕೆಲವು ಅಂಶಗಳನ್ನು ಲೇಬರ್ ಕೋರ್ಟ್ ಅಜ್ಯುಡಿಕೇಷನ್‌ಗೋಸ್ಕರ ರೆಫರ್ ಮಾಡಿದ್ದೇವೆ. ಇದರ ಬಗ್ಗೆ ಜಾಯಿಂಟ್ ಲೇಬರ್ ಕಮಿಷನರ್‌ರವರು ಮತ್ತು ಲೇಬರ್ ಕಮಿಷನ್‌ರವರು ವಿಶೇಷವಾಗಿ ಗಮನವನ್ನು ಹರಿಸಿದ್ದಾರೆ.

ಇನ್ನು ಹೋಟೆಲ್ ಮತ್ತು ಸಿನಿಮಾದಲ್ಲಿ ಕೆಲಸ ಮಾಡತಕ್ಕ ನೌಕರರ ಬಗ್ಗೆ ಸರ್ಕಾರದವರು ಗಮನ ಹರಿಸಿಲ್ಲ ಎನ್ನುವ ಮಾತನ್ನು ಹೇಳಿದರು, ಆದರೆ ಮೊನ್ನೆ ತಾನೇ ಅವರೂ ಸಹ ಭೇಟಿಯಾಗಿದ್ದರು, ಹಾಗೂ ಎಸ್.ಕೆ.ಎಫ್.ನ ನೌಕರರೂ ಸಹ ಭೇಟಿಯಾಗಿದ್ದರು, ಆ ಕೆಲಸವನ್ನೆಲ್ಲಾ ಅಷ್ಟು ಅವಸರದಲ್ಲಿ ಮಾಡುವುದಕ್ಕಾಗುವುದಿಲ್ಲ, ಆದುದರಿಂದ ಅದರ ಕಡೆಗೆ ಗಮನವನ್ನು ಹರಿಸಿದ್ದೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಆಮೇಲೆ ಭಾರತ್ ಫ್ರಿಜ್‌ವೇರ್ಸ್ ಫ್ಯಾಕ್ಟರಿಯ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಅವರು ಸಹ ಕನ್‌ಸಿಲಿಯೇಷನ್ ಮೀಟಿಂಗ್‌ಗೆ ಬರಲಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು, ಅನಂತರ ಅವರು ಹಾಜರಾದರು ಆದರೆ ಅಲ್ಲಿ ಮಾತುಕತೆ ಫೆಲ್ಯೂರ್ ಆಯಿತು. ಆಗ ನಾವು ಅದನ್ನು ಪ್ರೊಹಿಬಿಟ್ ಮಾಡುವ ಪ್ರಸಂಗ ಬಂತು, ಅದರಲ್ಲಿ ಕೂಡ ಕೆಲವು ಅಂಶಗಳನ್ನು ಕೋರ್ಟಿಗೆ ರೆಫರ್ ಮಾಡಿದ್ದೇವೆ. ಅಲ್ಲಿ ಕಾರ್ಮಿಕರು ತಮಗೆ ಯಾರು ಬೇಕೋ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಳ್ಳಬಹುದು, ತಮ್ಮ ನಾಯಕರನ್ನು ಆರಿಸತಕ್ಕ ಹೊಣೆ ಜವಾಬ್ದಾರಿ ಅವರದ್ದೇ ಇದೆ. ಆದುದರಿಂದ ವಿನಾಕಾರಣ ನಮ್ಮ ಮೇಲೆ ದೋಷಾರೋಪಣೆ ಮಾಡತಕ್ಕಂತದು ಸರಿಯಲ್ಲ. ನಮ್ಮ ಅಧಿಕಾರಿಗಳೂ ಕೂಡ ಈ ವಿಷಯದಲ್ಲಿ ತಲೆ ಹಾಕಬಾರದೆಂದು ತಿಳಿಸಿದ್ದೇನೆ.

ಇನು ಮೆಟಲ್ ಲ್ಯಾಂಪ್ ಕ್ಯಾಪ್ಸ್ ಫ್ಯಾಕ್ಟರಿ ಬಹಳ ದಿವಸಗಳಿಂದ ನೆನಗುದಿಗೆ ಬಿದ್ದಿದೆ. ಮುಷ್ಕರ ಈಗ ತಾನೇ ಒಪ್ಪಂದಕ್ಕೆ ಬಂತು. ಕೆಲಸ ಶುರುವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಶ್ರೀ ಮುಲ್ಕಿಯವರು ಬೀಡಿ ವರ್ಕ್ಸ್ ಬಗ್ಗೆ ಮತ್ತು ಟ್ಯಾಡಿ ಟ್ಯಾಂಪರ್ಸ್‌ಗೆ ಮಿನಿಮಂ ವೇಜಸ್ ನಿಗದಿ ಮಾಡಬೇಕೆಂದು ಹೇಳಿದರು. ಬೀಡಿ ಕೆಲಸಗಾರರ ಬಗ್ಗೆ ಹೇಳುವುದಾದರೆ ಅವರಿಗೆ ವಿಶೇಷವಾಗಿ ಅವರ ಸ್ಥಿತಿಗಳನ್ನು ವಿಚಾರಿಸಿಕೊಳ್ಳುವುದರ ಸಲುವಾಗಿ ನಮ್ಮ ಹಿಂದಿನ ಕಾರ್ಮಿಕ ಮಂತ್ರಿಗಳವರ ಹಿರಿಯ ತನದಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವೊಂದು ವಿಷಯಗಳ ಬಗ್ಗೆ ನಾವು ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಬೇಕಾಗಿರುವುದರಿಂದ ಅವುಗಳನ್ನು ಬಿಟ್ಟು ಬಾಕಿ ಇಶ್ಯೂ ಆಫ್ ಪಾಸ್ ಬುಕ್ ಮತ್ತು ಮಿನಿಮಂ ವೇಜಸ್ ಮುಂತಾದವುಗಳನ್ನು ಇಂಪ್ಲಿಮೆಂಟೇಷನ್ ಮಾಡಿದ್ದೇವೆಂದು ಶ್ರೀ ಮುಲ್ಕಿಯವರಿಗೆ ಹೇಳಬಯಸುತ್ತೇನೆ.

ಇನ್ನು ಟ್ಯಾಡಿಟ್ಯಾಂಪರ್ಸ್ ಬಗ್ಗೆ ಹೇಳಿದರು. ಈ ಸೇಂದಿ ಇಳಿಸತಕ್ಕವರು ಅದರಲ್ಲೂ ಮಂಗಳೂರಿನಲ್ಲಿರತಕ ವರ ಪರಿಸ್ಥಿತಿ ಬಹಳ ನಿಕೃಷ್ಟವಾಗಿದೆ ಎಂದು ಅವರು ಶೋಷಣೆಗೆ ಒಳಗಾಗಿದ್ದಾರೆ ಅವರಿಗೆ ಕನಿಷ್ಟ ವೇತನವನ್ನು ನಿಗದಿ ಮಾಡಿಲ್ಲ ಎನ್ನುವಂಥ ಅಂಶವನ್ನು ಅವರು ಹೇಳಿದರು. ಈ ಟ್ಯಾಡಿಟ್ಯಾಂಪರ್ಸ್‌ಗೂ ಕೂಡ ಮಿನಿಮಂ ವೇಜಸ್ ಶೆಡ್ಯೂಲ್‌ನಲ್ಲಿ ಸೇರಿಸಲಾಗಿದೆ ಅದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ ಅದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಹೇಳಬಯಸುತ್ತೇನೆ: ಬೀಡಿ ಕೆಲಸಗಾರರಿಗೆ ಮಿನಿಮಂ ವೇಜಸ್ಸನ್ನು ೧೯೭೫ರಲ್ಲಿ ಪುನರ್ ವಿಮರ್ಶೆ ಮಾಡಿ ಕೊಡಲಾಗಿತ್ತು ಈಗ ಮತ್ತೆ ಪುನರ್ ವಿಮರ್ಶೆ ಮಾಡುವ ಸದಿಚ್ಛೆಯಿಂದ ಸರ್ಕಾರದವರು ೧೪–೨–೧೯೭೮ ನೇ ಇಸ್ವಿಯಂದು ನೋಟಿಫೈ ಮಾಡಲಾಗಿದೆ. ಅದಕ್ಕೆ ಏನಾದರೂ ಆಬ್ಜಕ್ಷನ್ ಬಂದ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

ಇನ್ನು ವಿಶೇಷವಾಗಿ ಕೆಲವು ಅಂಶಗಳನ್ನು ಶ್ರೀ ಫರ್ನಾಂಡಿಸ್'ರವರು, ಶ್ರೀ ಕಕ್ಕಿಲಾಯರವರು ಮತ್ತಿತರ ಸದಸ್ಯರುಗಳು ಹೇಳಿದ್ದಾರೆ. ವೈಯಕ್ತಿಕವಾಗಿ ಎಲ್ಲರ ಅಭಿಪ್ರಾಯಗಳಿಗೂ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ ಮತ್ತು ಈ ವರ್ಕ್ಸ್ ಮನ್‌ಶಿಫ್ ಆಕ್ಟ್ ಬಗ್ಗೆ ಶ್ರೀ ಕಕ್ಕಿಲಾಯರವರು ಮತ್ತು ಶ್ರೀ ಸುಬ್ಬಯ್ಯರವರು ಮಾತನಾಡಿದರು, ಆ ಅಧಿಕಾರವನ್ನು ರೆವಿನ್ಯೂ ಎ. ಸಿ. ಯವರಿಗೆ ಕೊಟ್ಟಿರುವುದರಿಂದ ಕೇಸ್‌ಗಳು ಬೇಗನೆ ಇತ್ಯರ್ಥವಾಗುವುದಿಲ್ಲ, ಇದರಿಂದ ಕೆಲವು ಸಾರಿ ೨,೩,೪ ವರ್ಷಗಳಾದರೂ ಇತ್ಯರ್ಥವಾಗಿಲ್ಲವೆನ್ನುವ ಬಗ್ಗೆ ಉದಾಹರಣೆಗಳೊಂದಿಗೆ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅಧ್ಯಕ್ಷರೇ ನೆನ್ನೆಯ ದಿವಸ ಮಾತನಾಡುತ್ತಾ ಮಾನ್ಯ ಸದಸ್ಯರು ಕೆಲವು ಸ್ಪಷ್ಟವಾದ ಉದಾಹರಣೆಯನ್ನು ಕೊಟ್ಟು ಅದರ ಮಾಹಿತಿಯನ್ನು, ಫೋಟೋವನ್ನು ಕಳುಹಿಸಿಕೊಟ್ಟಿದಾರೆ ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ಇದರ ಬಗ್ಗೆ ಒಂದು ವಿಚಾರಕ್ಕೆ ಬಂದಿದೆ, ಅದು ಪರಿಶೀಲನೆಯಲ್ಲಿದೆ. ಈ ಎ. ಸಿ. ಯವರಿಗೆ ಏನು ಅಥಾರಿಟಿ ಇದೆ ಅದನ್ನು ಬದಲಾವಣೆ ಮಾಡಿ ಅದನ್ನು ಲೇಬರ್ ಆಫೀಸರ್‌ರವರಿಗೂ ಅಥವಾ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರಿಗೋ ವಹಿಸಬೇಕು ಎನ್ನು ಯೋಚನೆ ಸರ್ಕಾರಕ್ಕೆ ಇದೆ ಅಂತ ಹೇಳಬಯಸುತ್ತೇನೆ. ಮತ್ತೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಗೆ ಇಂಪ್ಲಿಮೆಂಟೇಷನ್ ಆಫ್ ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಜಾರಿ ಮಾಡಲು ಅಧಿಕಾರ ಕೊಡಬೇಕೆಂದು ಮಾನ್ಯ ಸದಸ್ಯರು ತಿಳಿಸಿದರು, ಆದರೆ ಮೊದಲು ಅವರಿಗೇ ಆ ಅಧಿಕಾರವಿತ್ತು. ಅದರಿಂದ ವಿಳಂಬವಾಗುತ್ತಿತ್ತು, ಗ್ರಾಮಲೆಕ್ಕಿಗರಿಗೆ ವಿಶೇಷ ಕಾರ್ಯಗಳಿರುವುದರಿಂದ ಅವರು ಕೃಷಿ ಕಾರ್ಮಿಕರ ಲೇಬರ್ ಆಕ್ಟ್ ಪ್ರಕಾರ ಅವರಿಗೆ ಕಾಂಪನ್‌ಸೇಷನ್ ಕೊಡುವ ಕಡೆಗೆ ಗಮನ ಹರಿಸಲು ಆಗುತ್ತಾ ಇರಲಿಲ್ಲ. ಆದರೆ ಈಗ ಹಳೆಯ ಕಾನೂನನ್ನು ಸೂಪರ್ ಸೀಡ್ ಮಾಡಿ ಪುನಃ ಹೊಸದಾಗಿ ನೋಟಿಫಿಕೇಷನ್ ಮಾಡಲಾಗಿದೆ ಎಂದು ಹೇಳಬಯಸುತ್ತೇನೆ. ಕೃಷಿ ಕಾರ್ಮಿಕರ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರುಗಳು ಬಹಳ ಅನುಕಂಪವನ್ನು ತೋರಿಸಿದ್ದಾರೆ, ತಮ್ಮ ಹೃದಯವಂತಿಕೆಯನು ತೋರಿಸಿದ್ದಾರೆ. ಇಷ್ಟೆಲ್ಲಾ ಅನುಕಂಪ ಮತ್ತು ಹೃದಯವಂತಿಕೆಯನ್ನು ತೋರಿಸುತ್ತಿದ್ದಾಗ್ಯೂ ಕೂಡ ಒಂದಿಷ್ಟು ಕಾರ್ಯವಾಗಿಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇತಿಹಾಸದಿಂದಲೂ ತಾವು ನೋಡುವುದಾದರೆ ಜಮೀನ್ದಾರರಿಗೂ ಮತ್ತು ಕಾರ್ಮಿಕರಿಗೂ ತಾವು ಗ್ರಾಮಗಳಲ್ಲಿ ಹೋಗಿ ನೋಡುವುದಾದರೆ ಒಂದು ವಿಶೇಷವಾದ ಸಂಬಂಧವಿದ್ದೇ ಇದೆ. ಯಾವ ಲೇಬರ್ ಆಫೀಸರ ಹೋಗಿ ಅಲ್ಲಿ ಕಾರ್ಮಿಕರನ್ನು ಜಮೀನ್ದಾರರ ವಿರುದ್ಧವಾಗಿ ಎತ್ತಿ ಕಟ್ಟುವುದಕ್ಕೆ ಪ್ರಯತ್ನಪಟ್ಟರೂ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಆ ಕೃಷಿ ಕಾರ್ಮಿಕನಿಗೆ ಆ ಜಮೀನ್ದಾರ ಏನು ಒಂದು ಎರಡು ಸೇರು ರಾಗಿ, ಒಂದು ರೂಪಾಯಿ ಕೊಡುತ್ತಾನೋ ಅವನು ತಂದೆ ಇದ್ದ ಹಾಗೆ ನಾನು ಮಗ ಇದ್ದ ಹಾಗೆ ಎನ್ನುವ ಭಾವನೆ ಅವರಲ್ಲಿರುವುದರಿಂದ ಅವರಿಬ್ಬರಲ್ಲಿ

ತಾವು ಭಿನ್ನಾಭಿಪ್ರಾಯವನ್ನುಂಟುಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇವತ್ತು ಕೃಷಿ ಕಾರ್ಮಿಕರ ಸಂಘಟನೆ ಮಾಡತಕ್ಕ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಮತ್ತು ಕಾರ್ಮಿಕರ ನಾಯಕರ ಮೇಲೆ ಕೂಡ ಇದೆ, ನಾವು ಪ್ರತಿಯೊಂದು ವೇದಿಕೆಯ ಮೇಲೂ ಕೃಷಿ ಕಾರ್ಮಿಕರ ಬಗ್ಗೆ ನಮ್ಮ ಕಳಕಳಿಯನ್ನು ವ್ಯಕ್ತ ಮಾಡುತ್ತಿದ್ದೇವೆ ಆದರೆ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅವರಿಗೆ ಸರಿಯಾದ ತಿಳುವಳಿಕೆ ಕೊಡಬೇಕಾದ ಕಾರ್ಯವನ್ನು ಮಾಡುತ್ತಿಲ್ಲ. ಅದೇ ಕಾರ್ಖಾನೆಗಳಲ್ಲಿರುವ ಕಾರ್ಮಿಕರಿಗೆ ಏನಾದರೂ ಸ್ವಲ್ಪ ಅನ್ಯಾಯವಾದರೆ ಅವರು ಸತ್ಯಾಗ್ರಹ ಮಾಡುತ್ತಾರೆ, ಗಲಾಟೆ ಮಾಡುತ್ತಾರೆ ಆಗ ಅವರ ನಾಯಕರು ಡೆಲ್ಲಿಗೆ ಹೋಗುತ್ತಾರೆ, ಮಂತ್ರಿಗಳವರು ಡೆಲ್ಲಿಗೆ ಹೋಗಿ ಅದನ್ನು ಇತ್ಯರ್ಥ ಮಾಡುವುದಕೆ ಪ್ರಯತ್ನ ಮಾಡುವುದಕ್ಕೆ ಲಕ್ಷ್ಯ ಕೊಡುತ್ತಾರೆ. ಆದರೆ ಕೃಷಿ ಕಾರ್ಮಿಕರ ಬಗ್ಗೆ ಯಾರೂ ಕಳಕಳಿಯನ್ನು ವ್ಯಕ್ತಪಡಿಸುತ್ತಿಲ್ಲ. ಆದುದರಿಂದ ಮಾನ್ಯ ಸದಸ್ಯರುಗಳು ಮತ್ತು ಇತರ ಪಕ್ಷದ ನಾಯಕರುಗಳು ಇತ್ತ ಕಡೆಗೆ ಗಮನವನ್ನು ಹರಿಸುತ್ತಾರೆ ಎನ್ನುವ ಆಶಯ ವ್ಯಕ್ತ ಮಾಡಿ ಬಹುಶಃ ನಾವು ಮುಂದಿನ ವರ್ಷದಷ್ಟು ಹೊತ್ತಿಗೆ ಇದರ ಬಗ್ಗೆ ಒಂದು ಪ್ರಗತಿಯನ್ನು ಕಾಣುತ್ತೇವೆ ಎನ್ನುವ ಇಚ್ಛೆಯನ್ನು ವ್ಯಕ್ತಪಡಿಸುತ್ತೇನೆ.

ಟ್ರೇಡ್ ಯೂನಿಯನ್ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಎಷ್ಟು ಕೈಗಾರಿಕೆಗಳು ಬರುತ್ತವೆ ಎಂದರೆ ಅದರಲ್ಲಿ ೧೫, ೨೦ ಆರ್ಗನೈಜೇಷನ್ ಮಾತ್ರ ಬರುತ್ತವೆ ಆದರೆ ಕೃಷಿ ಕೈಗಾರಿಕೆಗೆ ಇದು ಸೀಮಿತವಾಗಿಲ್ಲ. ಆದುದರಿಂದ ಇವತ್ತು ನಾವು ಎಲ್ಲರೂ ಅದರ ಕಡೆಗೆ ಗಮನವನ್ನು ಹರಿಸಬೇಕಾಗಿದೆ. ಪ್ರತಿಯೊಬ್ಬ ನಾಯಕ ಮುಂಖಂಡರುಗಳೂ ಕೂಡ ಕಾರ್ಮಿಕರುಗಳು ತಮ್ಮ ಕಂಫರ್ಟ್ಸ್‌ಗಳನ್ನು ಕಡಿಮೆ ಮಾಡಿಕೊಂಡು ಕೃಷಿ ಕಾರ್ಮಿಕರ ಕಡೆಗೆ ತಮ್ಮ ಗಮನವನ್ನು ಹರಿಸಬೇಕೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲವೆಂದು ನಾನು ಭಾವಿಸುತ್ತೇನೆ.

ಇನ್ನು ಬಾಂಡೆಡ್ ಲೇಬರರ್ ವಿಷಯವಾಗಿ ಅಂಕಿಸಂಖ್ಯೆಗಳನ್ನು ಕೊಡಿ ಎಂದು ಕೇಳಿದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ತಾವು ಏನೋ ಆಸೆ ವಹಿಸಿ ಅವರನ್ನು ಬಿಡುಗಡೆ ಮಾಡಿದ್ದೀರಿ, ರಿಹ್ಯಾಬಿಲಿಟೇಟ್ ಮಾಡಿದ್ದೀರಿ ಈಗ ಆ ಕಾರ್ಯ ನಡೆಯುತ್ತಿಲ್ಲ ಎನ್ನುವ ಅಂಶವನ್ನು ಅವರು ಎತ್ತಿ ತೋರಿಸಿದ್ದಾರೆ. ಅವರು ಅಂಕಿಅಂಶಗಳನ್ನು ತರಿಸಿಕೊಡಿ ಎಂದು ಹೇಳಿದರು. ಅದನ್ನು ಅವರಿಗೆ ದೊರಕಿಸಿಕೊಡುವುದರಲ್ಲಿ ನನಗೆ ಸಾಧ್ಯವಾಗಲಿಲ್ಲ, ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಸಾಧ್ಯವಾದಷ್ಟು ಜಾಗ್ರತೆಯಾಗಿ ಡಿಟೈಲ್ಸ್ ಎಲ್ಲವನ್ನೂ ಪತ್ರ ಮುಖೇನ ತಿಳಿಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

11-00 A.M.

ಶ್ರೀ ವೈ. ರಾಮಕೃಷ್ಣ.—ಅದರ ಬಗ್ಗೆ ಎಲ್ಲಾ ಅಂಕಿಅಂಶಗಳನ್ನು ಹೇಳದಿದ್ದರೂ ಚಿಂತೆ ಇಲ್ಲ. ಅವರಿಗೆ ಬೇರೆ ಉದ್ಯೋಗಗಳನ್ನು ಒದಗಿಸಿಕೊಡುವುದಕ್ಕೆ ಯಾವ ಸ್ಕೀಮ್ ಇದೆ ಎಂಬುದನ್ನು ತಾವು ಇಲ್ಲಿ ಹೇಳಿ.

ಶ್ರೀ ಆರ್. ಎಸ್. ಪಾಟೀಲ್.—ನಾನು ತಮಗೆ ಎಲ್ಲಾ ವಿವರಗಳನ್ನೂ ಕಳಿಸಿಕೊಡುತ್ತೇನೆ.

SRI Y. RAMAKRISHNA.—There is no scheme in the Government.

ಶ್ರೀ ಆರ್. ಎಸ್. ಪಾಟೀಲ್.—ಆ ಬಗ್ಗೆ ಸ್ಕೀಮ್ ಇದೆ. ಅದನ್ನು ನಾನು ತೋರಿಸುತ್ತೇನೆ. ತಾವು ಒಂದು ಷಾರ್ಟ್ ನೋಟೀಸ್ ಕೊಶ್ಚನ್ ಕಳಿಸಿದರೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವೈ ರಾಮಕೃಷ್ಣ.—ಇಲ್ಲಿ ಅದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಹೇಳಿ ಎಂದು ನಾನು ಕೇಳುವುದಿಲ್ಲ. ಆ ಬಗ್ಗೆ ಸ್ಕೀಂ ಇದ್ದರೆ ದಯಮಾಡಿ ತಿಳಿಸಿ.

SRI S. M. YAHYA.—The sole purpose is to liberate them. That itself is a fundamental thing, ಅವರನ್ನು ಗುಲಾಮಗಿರಿಯಿಂದ ತೆಗೆದುಹಾಕುವುದೇ ಒಂದು ದೊಡ್ಡ ಕಂಸೆಪ್ಟ್. ಅದನ್ನು ತಾವು ಅಪ್ರಿಷಿಯೇಟ್ ಮಾಡಬೇಕು.

ಶ್ರೀ ವೈ. ರಾಮಕೃಷ್ಣ.—ನಾನು ಅದನ್ನು ಅಪ್ರಿಷಿಯೇಟ್ ಮಾಡಿದ್ದೇನೆ. ಆದರೆ ಅವರು ಮುಂದೆ ನೆಮ್ಮದಿಯಾಗಿ ಬದುಕುವುದಕ್ಕೆ ಅನುಕೂಲವಾಗುವಂತೆ ಏನಾದರೂ ಒಂದು ಸ್ಕೀಂ ಮಾಡಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಅವರನ್ನು ಲಿಬರೇಟ್ ಮಾಡಬೇಕು ಎಂದು ಕಂಸೆಪ್ಟ್ ಮಾಡುವುದು ಒಂದು ಭಾಗ. ಅದಾದಮೇಲೆ ಅವರನ್ನು ರಿಹ್ಯಾಬಿಲಿಟೇಟ್ ಮಾಡುವುದು ಹೇಗೆ ಎನ್ನುವುದು ಇನ್ನೊಂದು ಭಾಗ.

ಶ್ರೀ ಆರ್. ಎಸ್. ಪಾಟೀಲ್.— ಮಾನ್ಯ ಸದಸ್ಯರಿಗೆ ಆ ಬಗ್ಗೆ ವಿವರವನ್ನು ನಾನು ಕಳಿಸುತ್ತೇನೆ. ಅವರು ಆ ಬಗ್ಗೆ ಒಂದು ಷಾರ್ಟ್‌ನೋಟೀಸ್ ಕೊಶ್ಚನ್ ಹಾಕಿದರೆ ಇಲ್ಲಿ ವಿವರವಾಗಿ ಚರ್ಚೆ ಮಾಡಬಹುದು. ಆಮೇಲೆ ಮಾನ್ಯ ಕಕ್ಕಿಲಾಯರವರು 'ಕೇರಳ ಆಕ್ಟ್' ವಿಷಯವಾಗಿ ಒಂದು ಮಾತನ್ನು ಹೇಳಿದ್ದಾರೆ; ಏನೆಂದರೆ ಅದು ಒಂದು ಮಾಡಲ್ ಬಿಲ್; ಅದನ್ನು ಮಾನ್ಯ ರವೀಂದ್ರ ವರ್ಮರವರು ತಮ್ಮ ಒಪಿನಿಯನ್‌ಗೋಸ್ಕರ ಕಳಿಸಿದ್ದಾರೆ; ಈ ಬಗ್ಗೆ ತಮ್ಮ ಮೇ ತಿಂಗಳ ಕಾರ್ಮಿಕ ಪತ್ರಿಕೆಯಲ್ಲಿ ಪ್ರಚಾರ ಮಾಡಿದ್ದೀರಿ; ಕೆಲವು ರಾಜ್ಯಗಳು ಅದಕ್ಕೆ ಪರವಾಗಿದ್ದಾರೆ, ಕೆಲವು ರಾಜ್ಯಗಳವರು ಅದಕ್ಕೆ ವಿರೋಧವಾಗಿದ್ದಾರೆ; ತಾವು ಅದಕ್ಕೆ ಪರವಾಗಿದ್ದೀರಾ ಅಥವಾ ವಿರೋಧವಾಗಿದ್ದೀರಾ ಎಂಬುದನ್ನು ತಿಳಿಸಬೇಕು, ಎಂದು ಅವರು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುವುದೇನೆಂದರೆ ಆ ಆಕ್ಟ್ ನಮಗೆ ಬಂದಿದೆ. ಅದರಲ್ಲಿ ಅಳವಡಿಸಿರತಕ್ಕಂಥ ಕಾನೂನಿನ ಅಂಶ ಏನು ಎಂಬುದರ ಬಗ್ಗೆ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ. ಆದ್ದರಿಂದ ನಾವು ಅದಕ್ಕೆ ವಿರೋಧವಾಗಿದ್ದೇವೆಯೇ ಅಥವಾ ಪರವಾಗಿದ್ದೇವೆಯೇ ಎಂದು ಈಗಲೇ ಹೇಳುವುದು ಕಷ್ಟವಾದೀತು. ಆ ಆಕ್ಟ್‌ನಲ್ಲಿರತಕ್ಕಂ ಸೆಕ್ಷನ್‌ಗಳನ್ನು ನೋಡಿದನಂತರ ಅದರ ವ್ಯಾಪ್ತಿ ಏನು ಅದನ್ನು ಇಂಪ್ಲಿಮೆಂಟ್‌ಮಾಡತಕ್ಕಂಥಾದ್ದು ಯಾವರೀತಿ ಎಂಬುದನ್ನು ನೋಡಿದಮೇಲೆ ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಯೋಗ್ಯವಾಗಿರುತ್ತದೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಕಕ್ಕಿಲಾಯರವರು ಇನ್ನೊಂದು ಮಾತನ್ನು ಹೇಳಿದರು; ಏನೆಂದರೆ ಹುಬ್ಬಳ್ಳಿಯ ಮಹದೇವ ಟೆಕ್ಸ್‌ಟೈಲ್ಸ್‌ಮಿಲ್ ಮತ್ತು ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ ಮಿಲ್ಲನ್ನು ಮುಚ್ಚಿದ್ದಾರೆ ಎಂದು ಹೇಳಿದರು. ಈ ಬಗ್ಗೆ ಬಹುಷ: ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಯವರು ಸ್ವಲ್ಪ ದಿವಸಗಳ ಹಿಂದೆ...

ಶ್ರೀ ಎಸ್.ಎಸ್. ಅರಕೇರಿ.— ನಾನು ಹೇಳುವುದೇನೆಂದರೆ ಸೆಂಟ್ರಲ್ ಗೌರ್ನ್‌ಮೆಂಟ್ ಆಗಲಿ., ನಮ್ಮ ಕರ್ನಾಟಕ ಗೌರ್ನ್‌ಮೆಂಟ್ ಆಗಲೀ ಎಲ್ಲಾ ಫ್ಯಾಕ್ಟರಿಗಳಲ್ಲಿ ಕನ್ನಡಿಗರ ಹಿತರಕ್ಷಣೆಗಾಗಿ What are the measures you have taken to see that proper representation is given in all these factories to Kannadigas?

ಶ್ರೀ ಆರ್.ಎಸ್. ಪಾಟೀಲ್.— ಇನ್ನು ೯೦ ದಿವಸಗಳಲ್ಲಿ ಆ ಎರಡು ಕೈಗಾರಿಕೆಗಳನ್ನು ಶುರು ಮಾಡುವ ಬಗ್ಗೆ ಅವರಿಗೆ ಭರವಸೆಯನ್ನು ಕೊಟ್ಟಿದ್ದಾರೆ. ಇನ್ನೂ ೯೦ ದಿವಸಗಳು ಆಗದೇ ಇರುವಾಗ ಅಷ್ಟರಲ್ಲಿ ಅವರು ಈ ಬಗ್ಗೆ ಏತಕ್ಕೆ ಸಂಶಯ ಪಟ್ಟುಕೊಂಡರೋ ನನಗೆ ಅರ್ಥವಾಗಲಿಲ್ಲ. ಮಾನ್ಯ ಸದಸ್ಯರು ಕನ್ನಡಿಗರಿಗೆ ೬೦ ರಿಂದ ೭೦ ಪರ್ಸೆಂಟ್‌ವರೆಗೆ ಇಲ್ಲಿರತಕ್ಕಂಥ ಕೈಗಾರಿಕೆಗಳಲ್ಲಿ ನೌಕರಿ ಸಿಕ್ಕುವ ಹಾಗೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು. ಕೆಲವು ದಿವಸಗಳ ಹಿಂದೆ ಕೈಗಾರಿಕಾ ಮಂತ್ರಿಗಳು ಸಭೆಯಲ್ಲಿ ಕೈಗಾರಿಕೋದ್ಯಮಗಳನ್ನು ಉದ್ದೇಶಿಸಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಸನ್ಸ್ ಆಫ್ ದಿ ಸಾಯಿಲ್, ಅವರಿಗೆ ಪ್ರಿಫರೆನ್ಸ್ ಕೊಡಬೇಕು ಎಂದು ಹೇಳಿದ್ದಾರೆ. ತಾವು ೬೦,೭೦ ಪರ್ಸೆಂಟ್ ಇರತಕ್ಕಂಥ ಕನ್ನಡಿಗರಿಗೆ ೧೦೦೦ ರೂಪಾಯಿ ಸಂಬಳ ಬರತಕ್ಕಂಥ ಹುದ್ದೆಗಳನ್ನು ಮೀಸಲು ಇಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದೀರಿ. ಅದನ್ನು ಹೇಗೆ ಮಾಡಬೇಕು ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ.

ಶ್ರೀ ಎಸ್.ಎಸ್. ಅರಕೇರಿ.— ಅದೇ ಮುಖ್ಯವಾದ ಪ್ರಶ್ನೆ. ಅದಕ್ಕೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. If you could constitute a committee, it would be possible for us to suggest measure.

ಶ್ರೀ ಆರ್.ಎಸ್. ಪಾಟೀಲ್.— ಇದರಲ್ಲಿ ನಾವು ನೀವು ಕೂಡ ಪ್ರಯತ್ನ ಮಾಡತಕ್ಕಂಥಾದ್ದು ಇದೆ. ಕನ್ನಡಿಗರು ಎಂದರೆ ಕನ್ನಡನಾಡಿನಲ್ಲಿ ವಾಸಮಾಡತಕ್ಕಂಥಾವರೆಲ್ಲರೂ ಕನ್ನಡಿಗರು. ಅವರು ಕನ್ನಡ ಮಾತನಾಡಲಿ, ತೆಲಗು ಮಾತನಾಡಲಿ, ತಮಿಳು ಮಾತನಾಡಲಿ ಅವರೆಲ್ಲರೂ ಕನ್ನಡಿಗರು ಎಂದು ನಾವು ತಿಳಿದುಕೊಳ್ಳಬೇಕು. ಕನ್ನಡವನ್ನು ಮಾತನಾಡುವವರು ಮಾತ್ರ ಕನ್ನಡಿಗರು ಎಂದರೆ ಅದು ಕಷ್ಟವಾಗುತ್ತದೆ.

ಶ್ರೀ ಎಸ್.ಎಸ್. ಅರಕೇರಿ.— ಕರ್ನಾಟಕದಲ್ಲಿದ್ದುಕೊಂಡರೂ ತೆಲಗು, ಮರಾಠಿ, ತಮಿಳು ಮಾತನಾಡತಕ್ಕಂಥವರೇ ಫ್ಯಾಕ್ಟರಿಗಳಲ್ಲಿ ಹೆಚ್ಚಿನ ಪರ್ಸೆಂಟ ತೆಗೆದುಕೊಂಡು ಹೋಗುತ್ತಿದ್ದಾರೆ. ಯಾರು ನಿಜವಾದ ಕನ್ನಡಿಗರು ಇದ್ದಾರೆ ಅವರಿಗೆ ಫ್ಯಾಕ್ಟರಿಗಳಲ್ಲಿ ಹೆಚ್ಚಿನ ಪರ್ಸೆಂಟ್ ಕೊಟ್ಟು ಅಲ್ಲಿಗೆ ಅವರನ್ನು ತೆಗೆದುಕೊಳ್ಳುತ್ತಾ ಇಲ್ಲ. In all these factories, Kannadigas are not getting their due share. What are the measures you are going to take in this connection?

ಶ್ರೀ ಆರ್.ಎಸ್. ಪಾಟೀಲ್.— ತಾವು ಹೇಳಿದ್ದೀರಿ ಫ್ಯಾಕ್ಟರಿಗಳಲ್ಲಿ ಹೆಚ್ಚು ಕನ್ನಡಿಗರಿಗೆ ಅವಕಾಶ ಮಾಡಿಕೊಡಿ ಎಂದು. ಇದರಲ್ಲಿ ಏನಾಗುತ್ತದೆ ಎಂದರೆ ತಮಿಳುನಾಡಿನಿಂದ ಕೆಲವರು ಬರುತ್ತಾರೆ ಇವತ್ತು ಅವರು ನಿಮ್ಮ ಮನೆಯಲ್ಲಿ ಇರುತ್ತಾರೆ. ಕೇರಳದವರು ಬರುತ್ತಾರೆ, ನಮ್ಮ ಮನೆಯಲ್ಲಿ ಇರುತ್ತಾರೆ; ನಮ್ಮ ಮನೆಯ ಅಡ್ರೆಸ್ ಕೊಡುತ್ತಾರೆ. ಅವರು ಇಲ್ಲಿ ಇದ್ದಷ್ಟು ದಿನ ಇಂತಹವರು ಎಂದು ಗುರುತು ಹಿಡಿಯುವುದು ಕಷ್ಟವಾಗುತ್ತದೆ. ಅವರನ್ನು ಗುರುತು ಹಿಡಿಯಬೇಕಾದರೆ ಪೋಲೀಸರನ್ನು ಇಡಬೇಕಾಗುತ್ತದೆ. ಅದು ಸಾಧ್ಯವೂ ಇಲ್ಲ. ಈ ಬಗ್ಗೆ ನಾವು ನೀವು ಇಬ್ಬರೂ ಕೂಡಿ ಒಂದು ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಇನ್ನು ೭೦–೮೦ ಪರ್ಸೆಂಟ್‌ವರೆಗೆ ಈ ಸನ್ಸ್ ಆಫ್ ದಿ ಸಾಯಿಲ್, ಇವರಿಗೆ ಅವಕಾಶ ಕೊಡಬೇಕು ಎನ್ನತಕ್ಕಂಥಾದ್ದನ್ನು ವಿಚಾರ ಮಾಡೋಣ.

SRI C.M. ARMUGHAM.— If that is accepted 80% of the people who are in Delhi Secretariat will go to the Uttarpradesh only. Mr. Arakeri should note down. Uttarpradesh is controlling the Delhi Secretariat today.

SRI S.S. ARAKERI.— In Maharashtra and all other States they are giving more weight to the sons of the soil. Why the Karnataka is not following that principle. This is my question.

ಶ್ರೀ ಆರ್.ಎಸ್. ಪಾಟೀಲ್.— ಇನ್ನೊಂದು ಅಂಶ ಏನೆಂದರೆ ಈ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿರತಕ್ಕಂಥವರೆಲ್ಲಿ ಕರ್ನಾಟಕದವರು ಯಾರಿದ್ದಾರೆ? ಯಾರೂ ಇಲ್ಲ. ತಮಿಳುನಾಡಿನಿಂದ ಬಂದಂಥ ಜನ, ಬೇರೆ ಬೇರೆ ಕಡೆಗಳಿಂದ ಬಂದಂಥ ಜನ ಇವತ್ತು ಅದರಲ್ಲಿ ಬಂಡವಾಳ ಹೂಡಿದ್ದಾರೆ. ಇದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್. ಅರಕೇರಿ.— ಕರ್ನಾಟಕದವರ ಬಗ್ಗೆಯೂ ಸಹ ತಾವು ಅಭಿಮಾನ ಇಟ್ಟುಕೊಳ್ಳಬೇಕು.

ಶ್ರೀ ಆರ್.ಎಸ್. ಪಾಟೀಲ್.— ನಿಮ್ಮಷ್ಟೇ ಅಭಿಮಾನ ನನಗೂ ಇದೆ. ನಮ್ಮ ಹುಡುಗರಿಗೆ ಹೆಚ್ಚು ಅವಕಾಶ ಅಲ್ಲಿ ಸಿಕ್ಕಬೇಕು ಎನ್ನತಕ್ಕಂಥ ಅಭಿಮಾನ ನನಗೆ ಇದೆ. ಆ ಅಭಿಮಾನವಿಲ್ಲದೇ ನಾವು ಜೀವನ ಸಾಗಿಸುವುದಕ್ಕೆ ಆಗುವುದಿಲ್ಲ.

ಶ್ರೀ ಯು.ಬಿ. ಬೋರ್‌ಕರ್.— ಹೀಗೆ ಬಾಯಿಲ್ಲಿ ತೋರಿಸುವ ಅಭಿಮಾನ ಕೃತಿಯಲ್ಲಿ ಬರಲಿ ಎಂದು ಹೇಳಬಯಸುತ್ತೇನೆ. ತಾವು ಹೇಳಿದಿರಿ ಕನ್ನಡಿಗರು ಯಾರು, ತಮಿಳರು ಯಾರು ಎಂಬುದು ಗೊತ್ತಾಗುವುದಿಲ್ಲ ಎಂದು. ಆದರೆ ನಾನು ಹೇಳುವುದೇನೆಂದರೆ ಅವರು ಯಾರು ಎಂಬುದನ್ನು ಅವರ ಸರ್ಟಿಫಿಕೇಟ್‌ನಲ್ಲಿ ಅವರ ಭಾಷೆಯಲ್ಲೇ ಎಲ್ಲವನ್ನೂ ನಮೂದಿಸಿರುತ್ತಾರೆ. ಇದು ಏತಕ್ಕೆ ಗೊತ್ತಾಗುವುದಿಲ್ಲವೋ ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಆರ್.ಎಸ್. ಪಾಟೀಲ್ — ತಾವು ಹೇಳಿದ ಅಂಶ ನನಗೆ ಗೊತ್ತಾಯಿತು. ಅವರು ತಮಿಳರೇ, ಆಗಿರಲಿ, ತೆಲುಗರೇ ಆಗಿರಲಿ ಅವರ ಭಾಷೆಯ ಮೇಲೆ ಗುರುತು ಹಿಡಿಯಬಹುದು ಎಂದು ತಾವು ಹೇಳಿದಿರಿ. ಆದರೆ ಉದಾಹರಣೆಗೆ ಮಾನ್ಯ ಆರ್ಮುಗಂರವರನ್ನು ತೆಗೆದುಕೊಂಡರೆ ಅವರು ಇಂಗ್ಲೀಷ್, ತಮಿಳು, ತೆಲಗು ಭಾಷೆಗಳನ್ನು ಚೆನ್ನಾಗಿ ಮಾತನಾಡುತ್ತಾರೆ. ಅವರ ಮಾತೃಭಾಷೆ ಯಾವುದು ಎಂಬುದನ್ನು ತಾವು ಹೇಳುತ್ತೀರಾ ನೋಡೋಣ, ಅದು ಕಷ್ಟ.

ಶ್ರೀ ಗಂಗಾಧರ್.— ಕೇರಳದಲ್ಲಿ ಇದಕ್ಕೆ ಒಂದು ಶಾಸನ ಮಾಡಿದ್ದಾರೆ. ಅಲ್ಲಿ ಮಲೆಯಾಳಿ ಜನಕೆ ಎಲ್ಲೋ ಆಗಲಿ ಉದ್ಯೋಗ ಸಿಕ್ಕದೇ ಇದ್ದ ಪಕ್ಷದಲ್ಲಿ ಸರ್ಕಾರದವರು ಅವರಿಗೆ ಪವರ್ ಮತ್ತು ರಾ ಮೆಟೀರಿಯಲ್ಸನ್ನು ಕೊಡುವುದಿಲ್ಲ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ಎಂಬುದನ್ನು ತಿಳಿಯಬೇಕಾದರೆ ಅಲ್ಲಿಯ ಶಾಸನ ಯಾವರೀತಿ ಇದೆ ಎಂಬುದನ್ನು ನೋಡಬೇಕು. There is a law, I learnt. ಅದರ ಪ್ರಕಾರ 80% of the jobs must be given to the Malayalee people ಎಂದು ಮಾಡಿದ್ದಾರೆ ಮತ್ತೆ ಮಾನ್ಯ ಕಕ್ಕಿಲಾಯರವರು ಬಹಳ ಉದ್ವೇಗದಿಂದ ಮಾತನಾಡಿದರು. ಅವರು ದೆಹಲಿಯಲ್ಲಿ ನಡೆದಂತಹ ಚರ್ಚೆ, ಭೂತಲಿಂಗಂ ರವರ ವರದಿ ಇಂಡಸ್ಟ್ರೀಸ್‌ನಲ್ಲಿರುವ ಕಾರ್ಮಿಕರಿಗೆ ಅನ್ಯಾಯವಾಗುವುದಿದೆ. ಅದರಿಂದ ಎಲ್ಲಾ ಕಾರ್ಮಿಕರು ಭಯ, ಭೀತಿಯಿಂದ ಇದ್ದಾರೆಂಬುದು ಶ್ರೀಮಾನ್ ಕಕ್ಕಿಲಾಯರವರ ಭಾಷಣದಿಂದ ಕಂಡುಬಂತು. ಭೂತಲಿಂಗಂ ವರದಿಯ ಬಗ್ಗೆ ತಾವು ಎಷ್ಟು ಆಸಕ್ತಿ ವಹಿಸಿ ನೋಡುತ್ತಿದ್ದಿರೋ ಅಷ್ಟೇ ಆಸಕ್ತಿ ವಹಿಸಿ ನಾನು ನಡೆಯುತ್ತಿದೆ ಎಂಬುದನ್ನು ನಾನೂ ನೋಡುತ್ತಿದ್ದೇನೆ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆ ಬಂದದ್ದೇ ಆದರೆ ಅದನ್ನು ಸಹಿಸುವುದಿಲ್ಲ ಪ್ರತಿಭಟಿಸುತ್ತೇವೆ ಎನ್ನುವ ಮಾತನ್ನು ತಮಗೆ ಹೇಳಬಯಸುತ್ತೇನೆ. ಇಂಡಸ್ಟ್ರೀಸ್ ರೂಲ್ಸ್‌ನ ಪಾಲಿಸಿ ಬಗ್ಗೆ ಇನ್ನೂವರೆಗೂ ಕೂಡ ಬಂದಿಲ್ಲ. ಆ ರೀತಿ ಬಂದಿದ್ದೇ ಆದರೆ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ. ಇಷ್ಟು ಮಾತನ್ನು ಹೇಳಿ ಬಹುಶ: ತಾವು ಕೇಳಿದಂತಹ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ಬೋನಸ್ ಬಗ್ಗೆ ಕೆಲವು ವಿಷಯಗಳನ್ನು ಹೇಳಿದರು. ಬೋನಸ್ ಬಗ್ಗೆ ಕೇಂದ್ರ ಸರ್ಕಾರದವರು ಇನ್ನೂ ಏನೂ ನಿರ್ಣಯ ತೆಗೆದುಕೊಂಡಿಲ್ಲ, ಸ್ವಲ್ಪ ದಿವಸ ಕಾದು ನೋಡೋಣ ಬೋನಸ್ ನೀತಿಯನ್ನು ಸರಿಪಡಿಸಬಹುದು. ಕಾದು ನೋಡೋಣ. ಏನು ನಿರ್ಣಯ ತೆಗೆದು ಕೊಳ್ಳುತ್ತಾರೆ? ಇಷ್ಟನ್ನು ಮಾತ್ರ ನಾನು ಹೇಳಬಯಸುತ್ತೇನೆ. ಆಮೇಲೆ ನಮ್ಮ ಕೆಲವು ಮಿತ್ರರು ಎಂಪ್ಲಾಯ್‌ಮೆಂಟ್ ಎಕ್ಸೇಂಜ್ ಬಗ್ಗೆ ಮಾತನಾಡಿದರು. ಸಮಯದ ಅಭಾವ ಇದ್ದುದರಿಂದ ಕೆಲವರು ಇಲಾಖೆಯವರನ್ನು ಪ್ರಶಂಸನೀಯ ಮಾಡಿದರು. ಕೆಲವರು ಏನು ಮಾಡಬೇಕು ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದರು. ಮತ್ತೆ ಕೆಲವು ಸದಸ್ಯರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು. ಇದರ ಬಗ್ಗೆ ಒಂದೆರಡು ಮಾತುಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ಖಡ್ಡಾಯವಾಗಿ ರಿಜಿಸ್ಟ್ರೇಷನ್ ಮಾಡಿಸಬೇಕೆಂಬುದೇನೂ ಇಲ್ಲ. ನೀವು ಬೇಕಾದರೆ ಮಾಡಿಸಬಹುದು, ಸಾಕಾದರೆ ಬಿಡಬಹುದು. ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದೇನಂದರೆ ಎಂಪ್ಲಾಯಿಮೆಂಟ್ ಎಕ್ಸ್‌ಚೆಂಜಿನಲ್ಲಿ ಜಾಬ್ ಆಪರ್ಚುನಿಟೀಸ್ ಕ್ರಿಯೇಟ್ ಮಾಡಿರುವುದಿಲ್ಲ. ಈ ರೀತಿ ಅವರ ಹೆಸರನ್ನು ಅಲ್ಲಿ ನೊಂದಣಿ ಮಾಡಿಸುವುದರಿಂದ ಒಂದು ಸಮಯಕ್ಕೆ ಬೇಕಾಗಬಹುದೆಂದು ಅವಲಂಬಿಸಿರುವುದರಿಂದ ಎಲ್ಲರಿಗೂ ಖಡ್ಡಾಯ ಮಾಡುತ್ತಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದೊಡ್ಡ ಸಂಖ್ಯೆಯಲ್ಲಿ ಏನು ರಿಜಿಸ್ಟ್ರೇಷನ್ ಮಾಡಿಸುತ್ತಾರೆ ಇದಕ್ಕೆ ಕಾರಣ ಇದರಿಂದ ಮುಂದೆ ನಮಗೆ ಮಾರ್ಗದರ್ಶನವಾಗಬಹುದೇನೋ, ಮತ್ತೆ ಯಾರಾದರೂ ಎಂಪ್ಲಾಯ್‌ಮೆಂಟ್‌ಗೆ ಕೇಳಿದ ಮೇಲೆ ನಮಗೆ ಅವಕಾಶ ಸಿಕ್ಕಬಹುದೇನೋ ಎನ್ನುವ ಉದ್ದೇಶದಿಂದ ರಿಜಿಸ್ಟ್ರೇಷನ್ ಮಾಡಿಸುತ್ತಾರೆ. ಆದರೆ ಅಲ್ಲಿ ನಿಜವಾಗಿ ಇರತಕ್ಕಂಥ ಪರಿಸ್ಥಿತಿ ಏನೆಂದರೆ ಯಾರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜನ್ನು ಕೇಳುವುದೇ ಇಲ್ಲ. ಕೆ.ಇ.ಬಿ. ಮತ್ತು ಕೆ.ಎಸ್ ಆರ್.ಟಿ.ಸಿ. ಮತ್ತೆ ರಿಕ್ರೂಟ್‌ಮೆಂಟ್ ಕಮಿಟೀಸ್‌ಗಳೇನಿವೆ, ಅವು ರಾಜ್ಯ ಮಟ್ಟದಲ್ಲಿವೆ, ಜಿಲ್ಲಾ ಮಟ್ಟದಲ್ಲಿವೆ. ಅವರು ಯಾರೂ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿಗೆ ಕೇಳುವುದೇ ಇಲ್ಲ. ಆದರೆ ಉತ್ತರ ಪ್ರದೇಶದಲ್ಲಿ ಯಾವುದೇ ರೀತಿಯ ರೆಕ್ರೂಟ್ ಮಾಡಬೇಕಾದರೆ ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ಮುಖಾಂತರ ಅವರ ಹೆಸರನ್ನು ತರಿಸಿಕೊಳ್ಳಬೇಕಾಗುತ್ತದೆ. ಈ ಕ್ರಮವನ್ನು ಅವರು ಅನುಸರಿಸುತ್ತಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನನ್ನು ಹೊರತು ಪಡಿಸಿ ಇನ್ನುಳಿದ ಎಲ್ಲಾ ಇಲಾಖೆಯವರು, ಪಬ್ಲಿಕ್ ಸೆಕ್ಟಾರ್ ಮತ್ತೆ ಇಂಡಸ್ಟ್ರೀಯಲ್ ಸೆಕ್ಟಾರ್ ಮತ್ತು ಗೌರ್ನಮೆಂಟ್ ಇಂಡಸ್ಟ್ರೀಸ್‌ನವರು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನ ಮೂಲಕವೇ ಅವರ ಹೆಸರುಗಳನ್ನು ತರಿಸಿಕೊಳ್ಳುವುದಕ್ಕೆ ಏನಾದರೂ ಮಾಡಿದರೆ ಮಾತ್ರ ಎಂಪ್ಲಾಯ್‌ಮೆಂಟ್‌ನ ಎಕ್ಸೇಂಜಿಗೆ ಸ್ವಲ್ಪ ಬೆಲೆ ಬರುತ್ತದೆಂದು ನನಗನ್ನಿಸುತ್ತಿದೆ. ಇದನ್ನು ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮತ್ತೆ ಬ್ರಷ್ಟಾಚಾರದ ವಿಷಯವಾಗಿ ಮಾತನಾಡುತ್ತಾ ಮುಖ ನೋಡಿ ಹೆಸರುಗಳನ್ನು ಕಳುಹಿಸುತ್ತಾರೆಂಬುದನ್ನು ಶ್ರೀಮಾನ್ ಬೊಮ್ಮಾಯಿಯವರು, ಹೇಳಿದರು. ಆ ರೀತಿ ಮುಖ ನೋಡಿ ಹೆಸರನ್ನು ಕಳುಹಿಸುತ್ತಾರೆ ಎನ್ನುವುದು ಆಧಾರರಹಿತವಾದುದು. ಕಾರಣ ಏನೆಂದರೆ ಒಬ್ಬರಿಗೆ ಇಂತಿಂತಾ ಅರ್ಹತೆ ಇದ್ದರೆ ಇಂತಿಂತಾ ಅರ್ಹತೆ ಇರುವವರು

ನಮಗೆ ಬೇಕೆಂದು ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿಗೆ ಬರೆಯುತ್ತಾರೆ. ಅದನ್ನು ನೋಟೀಸ್ ಬೋರ್ಡಿನಲ್ಲಿ ಹಚ್ಚುತ್ತಾರೆ. ನಂತರ ಆ ಅರ್ಹತೆ ಇರತಕ್ಕಂಥವರನ್ನು ಪಟ್ಟಿ ಮಾಡುತ್ತಾರೆ. ಅದರಲ್ಲೂ ಶ್ರೀಮಾನ್ ಹಾವನೂರ್‌ರವರ ರಿಪೋರ್ಟ್ ಪ್ರಕಾರ ಕೆಲವು ಗ್ರೂಪ್ಸ್ ಎಂಬುದಾಗಿ ಮಾಡಿದ್ದಾರೆ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ಬಿ.ಸಿ , ಸ್ಪೆಷಲ್ ಗ್ರೂಪ್ ಎಂಬುದಾಗಿ ಮಾಡಿದ್ದಾರೆ ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ರೀತಿ ಮಾಡುವಾಗ ಮೊದಲು ರಿಜಿಸ್ಟರ್ ಮಾಡಿಸಿದ್ದವನಿಗೆ ಅರ್ಹತೆ ಇಲ್ಲದಿದ್ದರೆ ಅವನ ಹೆಸರು ಹೋಗುವುದಿಲ್ಲ, ಮತ್ತೆ ಆತನ ಹಿಂದೆ ರಿಜಿಸ್ಟರ್ ಮಾಡಿಸಿದವನಿಗೆ ಅರ್ಹತೆ ಇದ್ದರೆ ಅವನು ಹೆಸರನ್ನು ಟ್ರಾನ್ಸ್‌ಫರ್ ಮಾಡಬೇಕಾದಂತಹ ಪ್ರಶ್ನೆ ಬರುತ್ತದೆ. ಈ ರೀತಿಯ ವ್ಯವಹಾರ ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ನಡೆಯುತ್ತಿದೆ. It is open to the public. ಎಲ್ಲಿ ಅನ್ಯಾಯವಾಗಿದೆ ಎಂಬುದನ್ನು ಕಂಡು ಬಂದರೆ ಅದನ್ನು ಮೇಲಿನ ಅಧಿಕಾರಿಗಳು ವಿಚಾರ ಮಾಡುತ್ತಾರೆ. ಇನ್ನು ಮುಂದೆ ಆ ರೀತಿಯ ತೊಂದರೆಗಳು ಒದಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ನಾನು ಹೇಳಬಯಸುತ್ತೇನೆ. ತಾವು ಹೇಳಿದಂತೆ ಬ್ರಷ್ಟಾಚಾರವನ್ನು ಹೋಗಲಾಡಿಸಲು ಕಂಪ್ಯೂಟರ್ ಸಿಸ್ಟಂನ್ನು ನಾವು ಜಾರಿಗೆ ತಂದರೆ ಮಾತ್ರ ಸಾಧ್ಯ. ಏನೇನು ಅರ್ಹತೆ ಮತ್ತು ಅನುಭವ ಇರಬೇಕೆಂಬುದನ್ನು ಪಟ್ಟಿ ಮಾಡಿ ಅದನ್ನು ಕಂಪ್ಯೂಟರ್‌ಗೆ ಫೀಡ್ ಮಾಡಿದರೆ ಅದರಲ್ಲಿ ಯಾರ್ಯಾರು ಅರ್ಹತೆ ಪಡೆದಿದ್ದಾರೆಯೋ ಅವರನ್ನು ಪಟ್ಟಿಮಾಡಿ ಕಳುಹಿಸುತ್ತದೆ. ಆ ರೀತಿ ಮಾಡಿದರೆ ಮಾತ್ರ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ಮೇಲೆ ಇರತಕ್ಕಂಥ ಅಪಾದನೆ ದೂರವಾಗುತ್ತದೆ. ಇದನ್ನು ಉದಾಹರಣಾರ್ಥವಾಗಿ ಮೊದಲು ಬೆಂಗಳೂರಿನಲ್ಲಿ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಆದರೂ ಕಂಪ್ಯೂಟರ್ ಸಿಕ್ಕುವುದು ಬಹಳ ಕಷ್ಟವಾಗಿದೆ. ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಏಕೆಂದರೆ ಈಗ ನಮ್ಮಲ್ಲಿ ಪ್ರತಿಯೊಂದು ವರ್ಗದವರೂ ಇದನ್ನೇ ಅವಲಂಬಿಸಿದ್ದಾರೆ. ಮತ್ತೆ ಐ.ಟಿ.ಐ. ಟ್ರೈನಿಂಗ್‌ನಲ್ಲಿ ಸ್ಥಳ ಸಾಲದು ಎನ್ನುವ ಒಂದು ಮಾತನ್ನು ನನ್ನ ಕೆಲವು ಮಿತ್ರರು ಹೇಳಿದರು. ಸುಮಾರು ೬ ಸಾವಿರ ಚಿಲ್ಲರೆ ವಿದ್ಯಾರ್ಥಿಗಳಲ್ಲಿ ಸುಮಾರು ೨೭ ಸೀಟುಗಳನ್ನು ಟ್ರೈನಿಂಗ್ ಫಲವಾಗಿ ಕೊಟ್ಟಿದ್ದೇವೆ ಅವರು ೪೦–೫೦ ರೂಪಾಯಿಗಳ ಸ್ಟೈಫಂಡನ್ನೂ ಕೂಡ ಕೊಡುತ್ತಿದ್ದೇವೆ. ಸ್ಥಳ ಸಾಲದು ಎನ್ನುವ ಮಾತನ್ನು ಹೇಳುವುದಾದರೆ ಹಿಂದಿನ ವರ್ಷ ಅಷ್ಟು ವಿದ್ಯಾರ್ಥಿಗಳು ಬಂದಿರಲಿಲ್ಲ. ಈ ವರ್ಷ ಜಾಸ್ತಿಯಾಗಿದೆ. ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜಿನಲ್ಲಿರುವ ಬ್ರಷ್ಟಚಾರ ಮತ್ತು ಅಲ್ಲಿರತಕ್ಕಂಥ ಕೆಲಸ ತೊಂದರೆಗಳನ್ನು ಯಾವ ರೀತಿ ನಿವಾರಣೆ ಮಾಡಬೇಕೆನ್ನುವುದರ ಬಗ್ಗೆ ನಾವು ನೀವು ಎಲ್ಲರೂ ಸೇರಿ ಚಿಂತನೆಯನ್ನು ಮಾಡೋಣ ಎಂಬುದಾಗಿ ತಮಗೆ ಹೇಳಬಯಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.— ಹಿಂದಿನ ವರ್ಷ ಅಷ್ಟು ಜನರು ಬಂದಿರಲಿಲ್ಲ ಎಂಬುದಾಗಿ ಹೇಳುವುದು ಸರಿಯಲ್ಲ. ಮೂರು ವರ್ಷಗಳಿಂದಲೂ ಅಲ್ಲಿ ಸಿಟು ಸಿಗುತ್ತಿಲ್ಲ.

ಶ್ರೀ ಎಸ್.ಎಸ್. ಅರಕೇರಿ.— ೫೬ ಲಕ್ಷ ರೂಪಾಯಿ ಯೋಜನೆಯಲ್ಲಿ ಐ.ಟಿ.ಐ. ಎರಡನೆ ಹಂತವನ್ನು ಮಾಡಬೇಕೆಂದು ಮಾಡಿದ್ದರು. ಅದರ ಬಗ್ಗೆ ಪ್ರೊಗ್ರೇಸ್ ಏನು ಎಂಬುದಾಗಿ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಆರ್.ಎಸ್. ಪಾಟೀಲ್.— ಪ್ಲಾನ್, ಎಸ್ಟಿಮೇಟ್ ಎಲ್ಲ ರೆಡಿಯಾಗಿದೆ. ಕೆಲಸ ಶುರುವಾಗ ಬೇಕಾಗಿದೆ ಅಷ್ಟೆ.

ಶ್ರೀ ಪಿ. ರಾಮದೇವ್.— ಎಕ್ಸೈಜ್‌ನಲ್ಲಿ ಬಹಳ ಕಾಂಪ್ಲಿಕೇಷನ್ ಇರುತ್ತದೆ. ಆದ್ದರಿಂದ ನಾನು ಎಂಪ್ಲಾಯಮೆಂಟ್ ಮತ್ತು ಲೇಬರ್ ಬಗ್ಗೆ ಕೆಲವು ಪ್ರಶೆಗಳನ್ನು ಕೇಳುತ್ತೇನೆ.

SRI S.S. ARAKERI.— The landless labourers in the Agricultural Sector get wages only for 3 months. The rest of the period they will be without employment. I would like to know what steps Government would like to take to their job security?

ಶ್ರೀ ಆರ್. ಎಸ್. ಪಾಟೀಲ್.—ಆ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಕೌನ್ಸಿಲ್‌ನಲ್ಲಿ ಒಂದು ಹೇಳಿಕೆ ಕೊಟ್ಟರು. ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮನ್ನು ೮೫–೯೦ ಬ್ಲಾಕುಗಳಲ್ಲಿ ಇಂಪ್ಲಿಮೆಂಟ್ ಮಾಡಬಹುದು, ಕೇಂದ್ರ ಸರ್ಕಾರದವರು ಇದಕ್ಕೆ ೫ ಲಕ್ಷ ರೂ. ಗಳನ್ನು ಕೊಡುತ್ತಾರೆಂದು ಅವರು ಹೇಳಿದ್ದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಆದಕಾರಣ ಇದರಿಂದ ಸ್ವಲ್ಪಮಟ್ಟಿಗೆ ಪರಿಹಾರ ದೊರಕುತ್ತದೆಂದು ಭಾವನೆ ನನಗಿದೆ.

ಇನ್ನು ಸಾಮಾನ್ಯವಾಗಿ ನಾನು ಎಕ್ಸೈಜ್ ಇಲಾಖೆಯ ಮೇಲೆ ನಾನೂ ಬಹಳಷ್ಟು ಸಲಹೆಗಳನ್ನು ಮತ್ತು ಮಾರ್ಗದರ್ಶನಗಳನ್ನು ಮಾನ್ಯ ಸದಸ್ಯರಿಂದ ನಿರೀಕ್ಷೆ ಮಾಡಿದ್ದೆ. ಆದರೆ ನನ್ನ ಮಾನ್ಯ ಮಿತ್ರರು ಏತಕ್ಕೆ ಇದರ ಕಡೆಗೆ ಗಮನ ಹರಿಸಲಿಲ್ಲವೆಂಬುದು ನನಗೆ ತಿಳಿಯದಂತಾಗಿದೆ. ಹೇಗಿದ್ದರೂ ಪ್ರೊಹಿಬಿಷನ್ ಪಾಲಿಸಿ ಬರುತ್ತದೆ, ಇದು ಹೊರಟು ಹೋಗುತ್ತದೆ, ಆದಕಾರಣ ಇದರ ಬಗ್ಗೆ ಏತಕ್ಕೆ ಗುದ್ದಾಟ ಮಾಡ ಬೇಕೆಂದು ಯಾರೂ ಸಲಹೆಗಳನ್ನು ಕೊಡಲಿಲ್ಲವೆಂದು ಕಾಣುತ್ತದೆ. ಒಂದು ವೇಳೆ ಪಾನನಿರೋಧ ಜಾರಿಗೆ ಬಂದರೂ ಸಹ ನಾನು ಲೇಬರ್ ಮಂತ್ರಿಯಾಗಿ ಉಳಿಯುತ್ತೇನೆ. ಮಂತ್ರಿ ಪದವಿ ಹೋಗುತ್ತ ದೆಂಬ ಹೆದರಿಕೆ ನನಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಸಲಹೆಗಳನ್ನು ಕೊಟ್ಟರೆ ಅದನ್ನು ಕಾರ್ಯಗತ ಮಾಡ ತಕ್ಕಂಥ ಶಕ್ತಿ ನಿಮಗಿಲ್ಲ. ನಾವು ಕೊಟ್ಟ ಸಲಹೆಗಳೊಂದೂ ಸಹ ಕಾರ್ಯರೂಪಕ್ಕೆ ಬಂದಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ತಾವು ಎಲ್ಲವನ್ನೂ ಸಂಶಯದಿಂದ ತೆಗೆದುಕೊಂಡರೆ ಹೇಗೆ? ಬದಲಾದಂಥ ಪರಿಸ್ಥಿತಿಯಲ್ಲಿ ತಾವು ಸಲಹೆಗಳನ್ನು ಕೊಡಬಹುದಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಾಬಿನಲ್ಲಿ ೪೦೦ ಕೋಟಿ ರೂ. ಗಳು ಸೋರಿಹೋಗುತ್ತಿದೆ ಎಂಬುದಾಗಿ ಹೇಳಿದರೂ ಸಹ ತಾವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಛೇರ್‌ಮನ್.—ತಾವು ಕೊನೆಯಲ್ಲಿ ವಿವರಣೆ ಕೇಳಿ.

ಶ್ರೀ ಆರ್. ಎಸ್. ಪಾಟೀಲ್.—ಸರ್ಕಾರಕ್ಕೆ ಮೊದಲು ಈ ಬಾಬಿನಿಂದ ೬ ಕೋಟಿ ರೂ ಗಳಷ್ಟು ಮಾತ್ರ ಉತ್ಪನ್ನ ಬರುತ್ತಿತ್ತು; ಆದರೆ ತಾರೀಖು ೧-೧-೧೯೬೮ ರಿಂದ ಏರಿಕೆ ಪ್ರಾರಂಭವಾಯಿತು. ಅಂದರೆ ೧೨ ಕೋಟಿ ರೂಪಾಯಿಗಳವರೆಗೆ ಜಾಸ್ತಿಯಾಯಿತು. ಈ ರೀತಿ ವರ್ಷವರ್ಷೇ ಜಾಸ್ತಿ ಯಾಗುತ್ತಾ ಬಂದು ಈ ವರ್ಷ ಬರಿ ಲಿಲಾವಿನಿಂದಲೇ ಸರ್ಕಾರಕ್ಕೆ ೬೪ ಕೋಟಿ ರೂಪಾಯಿಗಳಷ್ಟು ಆದಾಯ ಬಂದಿದೆ. ನಮ್ಮ ಟೋಟಲ್ ಪ್ಲಾನ್ ಔಟ್‌ಲೇ ಅಂದರೆ ಯೋಜನಾ ವೆಚ್ಚ ೩೩೨ ಕೋಟಿ ರೂ. ಗಳಾಗಿದ್ದು, ಅದರಲ್ಲಿ ೨೦ ಪರ್ಸೆಂಟಿನಷ್ಟು ಆದಾಯ ಈ ಇಲಾಖೆಯಿಂದಲೇ ಬಂದಿದೆ. ಇದರ ಮಾರಾಟದಿಂದ ಬರತಕ್ಕಂಥ ಡ್ಯೂಟಿ ಎಜುಕೇಷನ್ ಸೆಸ್, ಹೆಲ್ತ್ ಸೆಸ್, ಸೇಲ್ಸ್‌ಟ್ಯಾಕ್ಸ್, ಇನ್‌ಕಂಟ್ಯಾಕ್ಸ್ ಇವೆಲ್ಲಾ ಮೂಲಗಳಿಂದ ಸುಮಾರು ೧೦೦ ರಿಂದ ೧೧೫ ಕೋಟಿ ರೂ. ಗಳವರೆಗೆ ಆದಾಯ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದೆ. ಇಷ್ಟೊಂದು ಆದಾಯವನ್ನು ಕಳೆದುಕೊಂಡು ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಕ್ಕಂಥ ಒಂದು ವಾದ ಕೆಲವು ಜನರಲ್ಲಿದೆ. ನಾವೂ ಸಹ ಜನರಲ್ಲಿ ಕುಡಿಯತಕ್ಕಂಥ ಅಭ್ಯಾಸವನ್ನು ಹೆಚ್ಚು ಮಾಡಬೇಕು, ಆ ಒಂದು ಚಟವನ್ನು ಜನರಲ್ಲಿ ಹೆಚ್ಚಿಸಬೇಕು ಎನ್ನುವಂತಹ ವಾದವನ್ನು ಒಪ್ಪುವುದಿಲ್ಲ. ಕೇಂದ್ರ ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತಂದರೆ ಅದರಿಂದ ಆಗತಕ್ಕಂಥ ನಷ್ಟದಲ್ಲಿ ೫೦ ಭಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಉಳಿದ ಹಣದ ಬಗ್ಗೆ ಏನು ಮಾಡಬೇಕೆಂಬುದನ್ನು ಅವರು ಹೇಳಲಿಲ್ಲ. ಉಳಿದ ೫೦ ಭಾಗವನ್ನು ಯಾವಯಾವ ಮೂಲಗಳಿಂದ ಕೊಡುತ್ತೇವೆಂಬುದನ್ನು ಅವರು ನಮಗೆ ಹೇಳಲಿಲ್ಲ. ಈ ಒಂದು ಅಂಶವನ್ನು ಗಮನಕ್ಕೆ ತೆಗೆದು ಕೊಂಡಾಗ, ಅಂದರೆ ಇಷ್ಟೊಂದು ಆದಾಯ ಕೊಡತಕ್ಕಂಥ ಇಲಾಖೆಯಲ್ಲಿ ಸಿಬ್ಬಂದಿವರ್ಗ ಅಷ್ಟೊಂದಿಲ್ಲ ವೆಂಬ ಅಂಶವನ್ನು ಮಾನ್ಯ ಸದಸ್ಯರು ಎತ್ತಿ ತೋರಿಸಿದ್ದಾರೆ. ಜೊತೆಗೆ ಅವರಿಗೆ ಸಾಕಷ್ಟು ಅನುಕೂಲ ಗಳನ್ನು ಕಲ್ಪಿಸಿಕೊಟ್ಟಿಲ್ಲವೆನ್ನತಕ್ಕಂಥ ಮಾತನ್ನು ಸಹ ಕೆಲವರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಇಲ್ಲಿ ಸಿಟಿ ಡಿಸ್ಟಿಲೇಷನ್ ಎಲ್ಲವನ್ನೂ ಬಂದ್ ಮಾಡಬೇಕಾದರೆ, ಈ ಬಗ್ಗೆ ಪ್ರಭಾವಯುತವಾಗಿ ಕ್ರಮ ಕೈಗೊಳ್ಳಬೇಕಾದರೆ. ಸಿಬ್ಬಂದಿವರ್ಗ ಸಾಕಷ್ಟು ಇರಬೇಕಾಗುತ್ತದೆ. ಜೊತೆಗೆ ಅವರಿಗೆ ವಾಹನ ಸೌಕರ್ಯ ಬೇಕಾಗುತ್ತದೆ. ಈ ಕೊರತೆಗಳು ಈ ಇಲಾಖೆಯಲ್ಲಿದೆ ನಮ್ಮ ಇಲಾಖೆಯವರು ರೈಡ್ ಮಾಡಲು ಹೋಗುವಾಗ ಪೋಲೀಸಿನವರ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ. ಅಕಸ್ಮಾತ್ ಅವರೇ ಹೋದರೆ, ಅವರಲ್ಲಿ ಸಾಕಷ್ಟು ಆಯುಧಗಳಿರುವುದಿಲ್ಲ. ಗಾರ್ಡ್‌ಗಳಿದ್ದಾರೆ. ಆದರೆ ಅವರಿಗೆ ಪೋಲೀಸರ ಸಹಾಯ ಯಾವಾಗಲೂ ಇರುವುದಿಲ್ಲ. ಅವರಿಗೆ ರಿವಲ್ವರ್ ಕೊಟ್ಟಿದ್ದೇವೆ. ಆದರೆ Cartridges ಕೊಟ್ಟಿಲ್ಲ. ಇದರ ಜೊತೆಗೆ ಸಾಯಂಕಾಲದ ಹೊತ್ತಿಗೆ ರಿವಾಲ್ವರ್‌ನ್ನು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಡಿಪಾಜಿಟ್ ಮಾಡಬೇಕು. ಅನಂತರ ಏನಾದರೂ ರೈಡ್ ಮಾಡಲು ಹೋದಾಗ ಬಹಳಷ್ಟು ಜನರು ಸೇರಿಬಿಟ್ಟರೆ ಪೋಲೀಸ್ ಸ್ಟೇಷನ್‌ಗೆ ಹೋಗಿ ರಿವಾಲ್ವರ್ ತರುತ್ತೇನೆಂದು ಹೇಳತಕ್ಕಂಥ ಒಂದು ಪರಿಸ್ಥಿತಿ ಇದೆ. ಇದರ ಜೊತೆಗೆ ಇವರಿಗೆ ಕೊಟ್ಟಿರುವ ವಾಹನಗಳು ಬಹಳ

ಹಳೆಯ ಕಾಲದವು. ರೋಡಿನಲ್ಲಿ ಹೋಗುವಾಗ ಇದ್ದಕ್ಕಿದ್ದಂತೆ ಗಪ್ಪನೆ ನಿಲ್ಲುತ್ತವೆ. ಆದರೆ ಕಳ್ಳಭಟ್ಟಿಯನ್ನು ತಯಾರು ಮಾಡುವವರ ಹತ್ತಿರ ಒಳ್ಳೆಯ ಕಂಡೀಷನ್‌ನಲ್ಲಿರತಕ್ಕಂಥ ವಾಹನಗಳಿರುವುದರಿಂದ, ಅವರು ನಮ್ಮ ಗಾರ್ಡ್‌ಗಳ ಕೈಗೆ ಸಿಗದೆ ಪಾರಾಗಿ ಹೊರಟುಹೋಗುತ್ತಾರೆ ಇಂತಹ ಅನೇಕ ನಿರ್ದೇಶನಗಳಿವೆ. ಆದರೂ ಸಹ ನಮ್ಮ ಸಿಬ್ಬಂದಿ ವರ್ಗ ಈ ಕೆಲಸವನ್ನು ಕಟ್ಟುನಿಟ್ಟಾಗಿ ಮಾಡುತ್ತಿದೆ. ಕೆಲವು ಮಾನ್ಯ ಸದಸ್ಯರು ರೈಡ್ ಮಾಡುತ್ತಿಲ್ಲ, ಇದನ್ನು ಕಡೆಗಣಿಸಲಾಗಿದೆ ಎಂದು ಹೇಳಿದರು. ಈ ಮಾತನ್ನು ನಾನು ಒಪ್ಪುವುದಿಲ್ಲ. ಈ ಬಗ್ಗೆ ತಮಗೆ ಅಂಕಿ ಅಂಶಗಳು ಬೇಕಾಗಿದ್ದರೆ ತಮಗೆ ಕೊಟ್ಟಿರುವ ವರದಿಯನ್ನು ಕೊನೆಯ ಪುಟ ನೋಡಿದರೆ ತಿಳಿಯುತ್ತದೆ.

> "During the year i.e., from 1st January 1977 to 13th December, 1977, 7840 Excise offences have been detected. In the course of detection 265 vehicles were seized (such as Cars, Autorickshaws Lorries and Bicycles, etc.) A total quantity of 70,946 litres of Non Duty paid liquors such as illicit arrack, I.M.L. Beer, etc., have been seized and 14,99,758 liters, i.e., nearly 15.00 lakhs liters of fermented wash destroyed,......

ಎಂಬುದಾಗಿ ಇಲ್ಲಿ ಎಲ್ಲ ವಿವರಗಳನ್ನು ಕೊಟ್ಟಿದ್ದೇವೆ. ಆದ್ದರಿಂದ ರೈಡ್ ಮಾಡುತ್ತಿಲ್ಲ, ಬಿಗಿ ಕ್ರಮ ಕೈಗೊಂಡಿಲ್ಲ ಎನ್ನುವಂತಹ ಮಾತನ್ನು ನಾನು ಒಪ್ಪುವುದಿಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಮಾಡಿದಂಥ ಟೀಕೆ ಆಧಾರ ರಹಿತವಾದಂತ ಟೀಕೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಇನ್ನು ಅಂಗಡಿಗಳನ್ನು ಬೇರೆ ಕಡೆಗಳಿಗೆ ಸ್ಥಳಾಂತರ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಎಲ್ಲ ಅಧಿಕಾರಿಗಳಿಗೂ ಸಹ ಸುತ್ತೋಲೆಯೊಂದನ್ನು ಕಳಿಸಲಾಗಿದೆ. ಆ ಸುತ್ತೋಲೆಯಲ್ಲಿ, ಯಾವಯಾವ ಭಾಗದಲ್ಲಿ ಅಂಗಡಿಗಳಿರಬೇಕು, ಯಾವಯಾವ ಜಾಗಗಳಲ್ಲಿ ಅಂಗಡಿಗಳಿದ್ದರೆ, ಅವುಗಳನ್ನು ಅಲ್ಲಿಂದ ಎತ್ತಬೇಕು ಎಂಬ ಬಗ್ಗೆ ವಿವರಿಸಲಾಗಿದೆ. ಈ ವಿಷಯದಲ್ಲಿ ಡಿ.ಸಿ. ಅವರೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ಹಳ್ಳಿಗಳ ಪಕ ದಲ್ಲಿ ಯಾವ ರೀತಿ ಇರಬೇಕು ಎಂಬುದನ್ನು ಇನ್ಸ್‌ಪೆಕ್ಷನ್ ಮಾಡಿ, ಅಲ್ಲಿಯ ಪಂಚಾಯಿತಿ ಸದಸ್ಯರನ್ನು ಕೇಳಿಕೊಂಡು ಅವರ ಸಲಹೆಯ ಮೇರೆಗೆ ಅಂಗಡಿಗಳನ್ನು ತೆರೆಯಲು ಅನುಮತಿ ಕೊಡಲಾಗುತ್ತಿದೆ. ಸಿಟಿ ಪ್ರದೇಶಗಳಲ್ಲಿಯಾದರೆ, ಇರತಕ್ಕಂಥ ಅಂಗಡಿಗಳನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಬೇಕೆಂದು ಮನವಿಗಳು ಬಂದಾಗ ಅಲ್ಲಿನ ಎಕ್ಸೈಜ್ ಕಮೀಷನರ್ ಅವರು ಮತ್ತು ಡಿ.ಸಿ. ಅವರು ಇತರೇ ಅಧಿಕಾರಿಗಳ ಜೊತೆಯಲ್ಲಿ ಆ ಸ್ಥಳಕ್ಕೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ ವರದಿ ಕೊಟ್ಟಮೇಲೆ ಆ ಒಂದು ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ. ಮತ್ತು ಈಗಾಗಲೇ ಕೆಲವು ಅಂಗಡಿಗಳನ್ನು ಸ್ಥಳಾಂತರ ಮಾಡಲಾಗಿದೆ ಎಂದು ಕೇಳುತ್ತೇನೆ. ಮಾನ್ಯ ಸದಸ್ಯರು ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ.

೧೧–೩೦ ಎ.ಎಂ.

ಇನ್ನು ಸೇಂದಿಯ ಉತ್ಪಾದನೆ ಎಷ್ಟು ಎಂದು ಕೇಳಿದ್ದಾರೆ. ಆ ವಿಷಯವನ್ನು ಹೇಳುವುದಾದರೆ ಅದು ಅದರ ಉತ್ಪಾದನೆ ಆ ಗಿಡಗಳ ಮೇಲೆ ಅವಲಂಬಿಸುತ್ತದೆ. ಒಂದು ಗಿಡಕ್ಕೆ ಒಂದು ವರ್ಷಕ್ಕೆ ಎಷ್ಟು ಉತ್ಪತ್ತಿಯಿದೆಯೆಂದು ನೋಡಬೇಕಾಗಿದೆ. ಒಂದು ಗಿಡ ಒಂದು ದಿನಕ್ಕೆ ೨ ಲೀಟರ್ ಸೇಂದಿ ಕೊಡುತ್ತದೆ. ನಮ್ಮ ರಾಜ್ಯದಲ್ಲಿ ೭೬–೭೭ರಲ್ಲಿ ೪,೬೩ ಲಕ್ಷದ ಸಾವಿರ ಗಿಡಗಳು ಹಾಗೂ ೭೭–೭೮ರಲ್ಲಿ ೪ ಲಕ್ಷದ ೪೯ ಸಾವಿರ ಗಿಡಗಳಿಂದ ಟ್ಯಾಪ್ ಮಾಡಲಾಗಿದೆ. ಒಂದು ಗಿಡ ಸುಮಾರು ೧೨೦ ದಿವಸಗಳ ವರೆಗೆ ೨ ಲೀಟರ್ ಸೇಂದಿಯನ್ನು ಕೊಡುತ್ತದೆ. ಉಳಿದ ದಿವಸಗಳಲ್ಲಿ ಹಿಂದೆ ಟ್ಯಾಪ್ ಮಾಡಿದ್ದ ಗಿಡಗಳಿಂದ ಕಾಂಪನ್ಸೇಟ್ ಮಾಡಿಕೊಳ್ಳುತ್ತಾ ಬರುತ್ತಾರೆ. ಅನಂತರ ಕ್ಲೋರೈಟ್ ಹೈಡಲ್‌ರೇಟ್‌ನಿಂದ ಕೆಲವು ಜನ ಕಂಟ್ರಾಕ್ಟರ್‌ಗಳು ಅದನ್ನು ಉಪಯೋಗಿಸುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ದಿನಾಂಕ ೧೦ನೇ ಮೇ ೧೯೭೮ರಲ್ಲಿ ಒಂದು ಟ್ರಾನ್ಸ್‌ಪೋರ್ಟ್ ಗೋಡೌನ್‌ನಲ್ಲಿ ಸುಮಾರು ೮೦೦ ಕೆ.ಜಿ. ಇರತಕ್ಕ ನಾಲ್ಕು ಬ್ಯಾರೆಲ್‌ಗಳನ್ನು ಪತ್ತೆ ಹಚ್ಚಿದ್ದಾರೆ. ೫೦೦ ಲೀಟರ್ ನೀರು ಸೇರಿಸಿದರೆ ೧೦೦೦ ಲೀಟರ್ ಅಡಲ್ಟರೇಟೆಡ್ ಆಗುತ್ತದೆ. ಇದು

ಎಲ್ಲಿಂದ ಬರುತ್ತದೆಂದು ಇನ್‌ವೆಸ್ಟಿಗೇಟ್ ಮಾಡುವುದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಬಾಂಬೆ ಹಾಗೂ ಮದ್ರಾಸ್‌ಗಳಿಗೆ ಕಳುಹಿಸಿದ್ದೇವೆ. ಇದನ್ನು ತಪ್ಪಿಸುವುದರ ಸಲುವಾಗಿ ಪ್ರಯತ್ನಮಾಡುತ್ತೇನೆ. ಇನ್ನು ರೆಕ್ಟಿಫೈಡ್‌ಸ್ಪಿರಿಟ್ ಏನು ಇದೆ ಇದು ೧೯೭೬-೭೭ರಲ್ಲಿ ೨೯೦ ಲಕ್ಷ ಲೀಟರ್ ಹಾಗೂ ೧೯೭೭-೭೮ ರಲ್ಲಿ ೩೧೭ ಲಕ್ಷ ಲೀಟರ್ ಉತ್ಪಾದನೆಯಾಗಿದೆ ಅದರಲ್ಲಿ ೭ ಸಂಸ್ಥೆಗಳು ಇವೆ ಅದರಲ್ಲಿ ಮೈಸೂರು ಶುಗರ್ ೯೬ಲಕ್ಷ ೪೦ ಸಾವಿರದ ಚಿಲ್ಲರೆ ಲೀಟರ್, ಉಗರ್ ಡಿಸ್ಟಿಲರಿ ೪೫ ಲಕ್ಷ ೨ ಸಾವಿರದ ೯೫೩, ಪಂಪಸಾಗರ, ಹಾಸ್‌ಪೇಟ್ ೫೬,೪೪,೩೬೩, ಸಂಕೇಶ್ವರ್ ೪೪,೨೪,೯೫೮ ಜೈಮಿನಿ ಡಿಸ್ಟಿಲರಿ ೯,೯೩,೨೫೩ ಲೀಟರ್ ಕೋಡೆ ಈಶ್ವರ್ ಡಿಸ್ಟಿಲರಿಯಿಂದ ೧೧,೩೯,೬೧೫ ಲೀಟರ್ ಹೀಗೆಯೇ ಒಟ್ಟು ೨,೬೯,೩೪,೮೧೩ ಲೀಟರ್ ಇದರಲ್ಲಿ ಅರಕ್‌ಗೆ ಉಪಯೋಗುವಾಗುತ್ತಿದೆ. ಇದರಿಂದ ೧೨೦ ಲಕ್ಷ ಲೀಟರ್ ಆಗುತ್ತಿದೆ. ಇನ್ನು ಬ್ಯಾಲೆನ್ಸ್ ಇಂಡಸ್ಟ್ರೀಯಲ್ ಹಾಗೂ ಫಾರ್‌ಮಿಸ್ಟ್‌ಕಲ್‌ಗೆ ಹೋಗುತ್ತಿದೆ. ಈ ರೆಕ್ಟಿಫೈಡ್ ಸ್ಪಿರಿಟ್‌ನಿಂದ ಅರಕ್‌ನ್ನು ತಯಾರು ಮಾಡುತ್ತಾರೆಂದು ತಮಗೂ ಗೊತ್ತಿದೆ. ಆದ್ದರಿಂದ ೨ ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನಿಂದ ೫ ಲೀಟರ್ ಸಾಮಾನ್ಯ ಅರೆಕ್‌ನ್ನು ಉತ್ಪಾದನೆ ಮಾಡಲು ಸಾಧ್ಯವೆನ್ನುವುದರ ಮೇಲೆ ಲೆಕ್ಕಹಾಕಿದರೆ ಗೊತ್ತಾಗುತ್ತದೆ. ಈ ಅರೆಕ್‌ನ್ನು ಡಿಸ್ಟಿಲರಿಯುವರಿಗೆ ಇಲ್ಲಿಯುವರೆಗೆ ಒಪ್ಪಿಸುತ್ತಾ ಇದ್ದದ್ದು ನಿಜ. ಆದರೆ ಮ್ಯಾನುಪ್ಯಾಕ್ಚರರ್ ಮಾಡಿದಂತಹ ನೀರು ಮತ್ತು ಅರೆಕ್‌ನ್ನು ವಿವಿಧ ಸೆಂಟರ್ಸ್‌ಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುವುದರಲ್ಲಿ ಸರ್ಕಾರಕ್ಕೆ ವೆಚ್ಚ ಬರುತ್ತಾ ಇರುವುದರಿಂದ ಇದನ್ನು ಬೇರೆಯುವರಿಗೆ ಇದನ್ನು ವಹಿಸಿದರೆ ಅವರು ನೀರನ್ನು ಸೇರಿಸಿ ಅರೆಕ್‌ನ್ನು ಮೆಚ್ಯೂರಟಿ ಮಾಡಿ ವಿವಿಧ ತಾಲ್ಲೂಕುಗಳಿಗೆ ಹಾಗೂ ಡಿಸ್ಟ್ರಿಬ್ಯೂಷನ್ ಸೆಂಟರ್ಸ್‌ಗಳಿಗೆ ಕಳುಹಿಸುವುದು ಸೂಕ್ತವೆಂದು ರೆಕ್ಟಿಫೈಡ್ ಅರೆಕ್‌ನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡಲಾಯಿತು. ಇದನ್ನು ಮಾಡುವಾಗ ಒಂದು ಅಂಶ ೭೫ರಲ್ಲಿ ರೆಕ್ಟಿಪೈಡ್ ಡಿಮೈಸನ್ನು ವಿವಿಧ ತಾಲೋಕುಗಳಿಗೆ ಕಳುಹಿಸುವ ಒಂದು ವ್ಯವಸ್ಥೆಯನ್ನು ಒಂದು ಸಂಸ್ಥೆಗೆ ವಹಿಸಿಕೊಟ್ಟರೆ ಹೇಗೆ ಎನ್ನುವ ಒಂದು ಮಾತನ್ನು ಕೂಡ ಹೇಳಿದ್ದೀರಿ? ಒಪ್ಪಿಸಿಕೊಟ್ಟಂತವರಿಗೆ ೨೦ ಪೈಸೆ ಸರ್ವೀಸ್ ಚಾರ್ಜಸ್ ಹಾಗೂ ಸ್ಪಿರಿಟ್‌ನ್ನು ವೇಸ್ಟೇಜ್ ಎಂದು ಟ್ರೀಟ್‌ಮಾಡುವುದು ಹಾಗೂ ಅನಂತರ ಎಲ್ಲಿ ಮಾರಾಟವಾಗಬೇಕು ಅಲ್ಲಿಗೆ ಸಾಗಿಸುವಂತಹ ಜವಾಬ್ದಾರಿಯೂ ಕೂಡ ಅವರಮೇಲೆ ಇದೆ. ಈ ರೀತಿ ೫ ಪರ್ಸಂಟ್ ವೇಸ್ಟೇಜ್ ಇದ್ದು. ಆದರೂ ಕೂಡ ಸ್ಪಿರಿಟ್ ಟ್ರೀಟೆಡ್ ವಾಟರ್ ಹಾಕಿದರೆ ೧೦೦ ಲೀಟರ್‌ಗೆ ೧೦೦ ಲೀಟರ್ ನೀರನ್ನು ಸೇರಿಸಿದರೆ ಅಷ್ಟು ವ್ಯಾಲ್ಯೂಮ್ ಬರುವುದಿಲ್ಲ. ಏತಕ್ಕೆ ಹೀಗಾಗುತ್ತಿದೆ ಎಂದರೆ ಕೆಮಿಕಲ್ ಆಕ್ಷನ್ ೨.೧ ಕಡಿಮೆಯಾಗುತ್ತದೆ. ಆದ್ದರಿಂದ ಸಾಗಾಣಿಕೆಯಲ್ಲಿ ಸ್ಪಿಲಿಂಗ್ ಮತ್ತು ಇತರ ಬಾಬಿಗೆಂದು ೫ ಪರ್ಸೆಂಟ್ ವೇಸ್ಟೇಜ್ ಕೊಡಬೇಕೆಂದು ಕೇಳಿರುವುದನು ತೀರ್ಮಾನ ಮಾಡುವುದಕ್ಕೆ ಒಂದು ಟೆಕ್ನಿಕಲ್ ಕಮಿಟಿ ಮಾಡಿ ಇದರಲ್ಲಿ ಸ್ಪೆಷಲಿಸ್ಟ್ ಫ್ರಂ ಯೂನಿವರ್ಸಿಟಿಯುವರನ್ನು ಹಾಕಿದ್ದೇವೆ. ಇವರನ್ನು ಒಳಗೊಂಡಂತ ಕಮಿಟಿಯುವರ ಐಎಂಎಲ್ ಸಾಗಾಣಿಕೆಯಲ್ಲಿ ಬರತಕ್ಕಂಥ ವೇಸ್ಟೇಜ್ ಎಷ್ಟು ಎಂದು ಕಂಡುಹಿಡಿಯುುವ ಸಲುವಾಗಿ ಪರೀಕ್ಷೇ ಮಾಡುತ್ತಾ ಇದ್ದಾರೆಂದು ಹೇಳಬಯಸುತ್ತೇನೆ. ಇನ್ನು ಫೆಬ್ರುವರಿ ೧೯೭೮ ರಲ್ಲಿ ಇದನ್ನು ೨೦ ಪೈಸೆ ಸಾಗಾಣಿಕೆ ಹಾಗೂ ಸರ್ವೀಸ್ ಚಾರ್ಜಸ್ ಇದ್ದದ್ದನ್ನು ರದ್ದು ಮಾಡಿದ್ದು ನಿಜ. ಇದರ ಮೇಲೆ ಅಕೌಂಟೆಂಟ್ ಜನರಲ್‌ರವರು ಕಾಸ್ಟ್‌ನ್ನು ಬೇರೆ ಬೇರೆಯುವರಿಂದ ಆಫರ್ಸ್ ತೆಗೆದುಕೊಂಡು ತೀರ್ಮಾನ ಮಾಡಬೇಕೆಂದು ಹೇಳಿದ್ದರಿಂದ ಇದನ್ನು ರದ್ದು ಮಾಡಿದ್ದಾರೆ. ಆದ್ದರಿಂದ ಬೇರೆ ಬೇರೆ ಕಂಪನಿಗಳ ಆಫರ್ಸ್ ಬಂದಿವೆ. ಇವುಗಳನ್ನು ಪರಿಶೀಲಿಸಿ ನೋಡಬೇಕು. ಇದು ಇನ್ನೂ ಪರಿಶೀಲನಾ ಹಂತದಲ್ಲಿ ಇರುವುದರಿಂದ ಈಗಾಗಲೇ ಮಾನ್ಯ ಸದಸ್ಯರನೇಕರು ೨೪ ಪೈಸೆಯಂತೆ ೧೯೮೪ನೇ ಇಸವಿಯುವರೆಗೆ ಒಂಪ್ಪಂದ ಮಾಡಿಕೊಂಡಿದಾರೆಂದು ಹೇಳಿದರೆ ಇದು ಯಾವ ಆಧಾರದಮೇಲೆ ಹೇಳಿದ್ದಾರೋ ನನಗೆ ಅರ್ಥವಾಗುವುದಿಲ್ಲ. ತಮ್ಮಗಳ ಗಮನದಲ್ಲಿ ಈ ೨೪ ಪೈಸೆ ಎಂದು ಏನು ಇದೆ ಇದು ದುರ್‌ದೈವದ ಸಂಗತಿಯೆಂದು ಹೇಳಬೇಕಾಗುತ್ತದೆ, ಯಾವುದೇ ಕಂಪನಿಯುವರ ಲೀಸ್ಟ್ ಆಫರ್ ಆಗಿದ್ದರೆ ಅದು ೧೯೮೪ನೇ ಇಸವಿಯುವರೆಗೆ ಕೊಡುವಂತಾದ್ದು, ಇದು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಇದರ ಬಗ್ಗೆ ನಾನು ಏನೂ ಹೇಳಲು ಸದ್ಯದಲ್ಲಿ ತಯಾರಿಲ್ಲ ತಾವು ಯಾರಾದರೂ ಇದರ ಬಗ್ಗೆ ಹೇಳುವುದಾದರೆ ಅದು ಆಧಾರರಹಿತವಾದದ್ದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಡೆಪ್ಯುಟಿ ಕಮಿಷನರ್ ಇಂಟಲೆಜೆನ್ಸ್, ಕಮರ್ಷಿಯಲ್ ಡಿಪಾರ್ಟ್‌ಮೆಂಟಿನವರು ಈ ಡಿಸ್ಟಿಲಿಯುವರ ಸಂಸ್ಥೆಗಳಿಗೆ ಸರ್‌ಪ್ರೈಸ್ ಇನ್ಸ್‌ಪೆಕ್ಷನ್‌ಗೆ ಹೋದರು. ಆ ಇನ್‌ಸ್ಪೆಕ್ಷನ್‌ನವರಿಗೆ ಕೆಲವೊಂದು ರೆಕಾರ್ಡ್‌ಗಳನ್ನು ಸೀಸ್ ಮಾಡುವ ಬಗ್ಗೆ ಕೊಡಲಿಲ್ಲ ಎಂದು ಹೇಳಿದರು. ಇನ್‌ಸ್ಪೆಕ್ಷನ್‌ಗೆ

ಹೋಗುವ ಅಧಿಕಾರಿಗಳು ಎಷ್ಟೇ ದೊಡ್ಡವರು ಇದ್ದರೂ ''ಸಿಸ್ಟಂಸ್ ಅಪ್ಲೈಡ್ ಟುದಿ ಪ್ರಾವಿಜನ್ ಆಫ್ ರೂಲ್ ಅಂಡ್ ಲಾ'' ಇದೆ. ಅದನ್ನು ತಾವು ಒಪ್ಪುತ್ತೀರಿ. ಲೀಗಲ್ ಅಡ್ವಾಂಟೇಜ್ ತೆಗೆದು ಕೊಳ್ಳುವುದು ಸಹಜ ಧರ್ಮ. ಇವರು ಅದನ್ನು ಮಾಡಿಲ್ಲ. ಇನ್‌ಸ್ಪೆಕ್ಷನ್‌ಗೆ ಪರವಾನೆ ಹೊಂದಿರಬೇಕು ಎನ್ನುವುದು ಯಾವುದರಲ್ಲೂ ಇಲ್ಲ. ಅವರು ಅಲೋ ಮಾಡಲಿಲ್ಲ, ಇದು ವಾಸ್ತವಾಂಶ. ಅಲ್ಲಿರತಕ್ಕ ಆಫೀಸರ್ ಡಿಸ್ಟಿಲರಿ ಆಫೀಸರ್ ಎಂದು ತಿಳಿದುಕೊಂಡು ಬಿಹೇವ್ ಮಾಡಿದ, ಸರ್ಕಾರಿ ಅಧಿಕಾರಿ ಎಂದು ತಿಳಿದುಕೊಂಡು ಬಿಹೇವ್ ಮಾಡಲಿಲ್ಲ ಎಂದು ಹೇಳಿದರು. ಇವೊತ್ತು ಉನ್ನತ ಅಧಿಕಾರಿ ರಸ್ತೆಯಲ್ಲಿ ಹೋಗುತ್ತಿರುವಾಗ ಆಕಸ್ಮಿಕವಾಗಿ ರೆಡ್ ಲೈಟ್ ಬಂದರೆ ಆತ ಹೋಗುವುದಕ್ಕೆ ಆಗುವುದಿಲ್ಲ. ಆತ ಅದನ್ನು ಉಲ್ಲಂಘಿಸಿ ಹೋಗಿದ್ದೇ ಆದರೆ ಅಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರ್ (ತನನ್ನು ನಡೆ ಪೋಲೀಸ್ ಸ್ಟೇಷನ್‌ಗೆ ಹೋಗೋಣ ಎಂದು ಕರೆದುಕೊಂಡು ಹೋಗುತ್ತಾರೆ. ಆತ ದೊಡ್ಡ ಆಫೀಸರ್ ಎಂದು ನೋಡ ವುದಕ್ಕೆ ಹೋಗುವುದಿಲ್ಲ. ಎಷ್ಟೇ ಅಧಿಕಾರ ಇದ್ದರೂ ಕೂಡ ಕಾನೂನಿನ ಕೆಳಗೆ ಹೋಗಬೇಕಾಗು ತ್ತದೆ. ಅವರು ಕಾನೂನಿನ ಕ್ರಮವನ್ನು ಅನುಸರಿಸಲಿಲ್ಲ. ಎಂದು ಎಲಿಮೆಂಟ್ ಆಫ್ ಸರ್‌ಪ್ರೈಸ್ ಏನು ಇದೆ ಅದು ಹೊರಟು ಹೋಯಿತು. ಆಮೇಲೆ ಅವರು ಪರವಾನೆ ತೆಗೆದುಕೊಂಡು ಅಲ್ಲಿಗೆ ಹೋಗುವುದು ಒಳ್ಳೆಯದಲ್ಲ ಎಂದು ಇನ್‌ಸ್ಪೆಕ್ಷನ್ ಡ್ರಾಪ್ ಮಾಡಿದ್ದಾರೆ.

SRI S. LAKSHMISAGAR.—What is the legal position?

ಶ್ರೀ ಆರ್.ಎಸ್. ಪಾಟೀಲ್.—ಡಿಸ್ಟಿಲರಿ ಆಫೀಸರ್ ಏನು ಇದ್ದಾರೆ ಆ ಆಫೀಸರ್ ಪರವಾನ್ ಪಡೆಯಬೇಕು.

ಇನ್ನು ಶುಗರ್ ಮ್ಯಾನೇಜಿಂಗ್ ಡೈರೆಕ್ಟರ್ ಏನು ಆಫರ್ ಕಳುಹಿಸಿದರು, ಇದರಲ್ಲಿ ಟ್ರಾನ್ಸ್‌ಫರ್ ಮಾಡಿ ಎಂದು ತಾವು ಏನು ಹೇಳಿದಿರಿ ಅದು ಅಷ್ಟೊಂದು ಸಮಂಜಸವಲ್ಲ ಎಂದು ಹೇಳ ಬಯಸುತ್ತೇನೆ. ತಾವು ಕೇಳಿದಂತಹ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಬೊಮ್ಮಾಯಿ ಅವರು ಇಲ್ಲಿ ಉತ್ಪಾದನೆ ಸೋರಿ ಹೋಗುತ್ತಿದೆ ಎಂದು ಹೇಳಿದರು. ಇವೊತ್ತು ಡಿಸ್ಟಿಲರಿ ಆಗತಕ್ಕ ಲಿಕ್ಕರ್ ಏನು ಇದೆ ಅದು ನಮ್ಮ ಸ್ಟೇಟ್‌ಗೆ ಸಾಕಾಗುವುದಕ್ಕಿಂತ ೩ ರಿಂದ ೬ ಪಟ್ಟು ಜಾಸ್ತಿಯಾಗುತ್ತಿದೆ. ಈಗ ನಮ್ಮ ಸ್ಟೇಟ್‌ನಲ್ಲಿ ಎಷ್ಟು ಕನ್‌ಸ್ಯೂಮ್ ಮಾಡುತ್ತಾರೆ ಅದಕ್ಕೆ ಡ್ಯೂಟಿ ಇದೆ ಮತ್ತು ಎಜುಕೇಷನ್ ಸೆಸ್, ಹೆಲ್ತ್ ಸೆಸ್ ಇವುಗಳ ನ್ನೆಲ್ಲಾ ಹಾಕುವುದರಿಂದ ಅದರ ಬೆಲೆ ಹೆಚ್ಚು ಇಡುವುದರಿಂದ ಅವರ ಕುಡಿತ ಕಡಿಮೆ ಆದೀತು ಎಂದು ಚೀಪ್ ರೇಟ್ ಇಡದೇ ಈ ಡ್ಯೂಟಿಗಳನೆಲ್ಲಾ ಹಾಕಿ ಬೆಲೆ ಹೆಚ್ಚು ಮಾಡಿದೆ. ಇನ್ನು ನಮ್ಮ ರಾಜ್ಯದಲ್ಲಿ ಬಳಕೆಯಾಗತಕ್ಕಂತಹ ಲಿಕ್ಕರ್ ಮೇಲೆ ಮಾತ್ರ ಇದೆ. ಇನ್ನು ಐ.ಎಂ.ಎಲ್. ವಿಸ್ಕಿ, ರಮ್, ಬ್ರಾಂದಿ, ಜಿನ್ ಇವೆಲ್ಲಾ ಹೊರ ಪ್ರಾಂತ್ಯಕ್ಕೆ ಹೋಗುತ್ತದೆ. ಇವೊತ್ತು ಲಿಕ್ಕರ್‌ಗೆ ೫೦ ಪೈಸೆ, ಬೀರ್‌ಗೆ ೬ ಪೈಸೆ ಡ್ಯೂಟಿ ಇರುವುದರಿಂದ ಅದು ಹೊರಗಡೆ ಹೋಗುತ್ತಿದೆ. ಆದ್ದರಿಂದ ಅದರ ಮೇಲೆ ಹೆಚ್ಚು ಡ್ಯೂಟಿ ಹಾಕಲಿಕ್ಕೆ ಹೋಗುವುದಿಲ್ಲ. ಈಗ ನಾವು ಅದರ ಮೇಲೆ ಹೆಚ್ಚು ಡ್ಯೂಟಿ ಹಾಕಿದರೆ ಮತ್ತೆ ವಾಪಸ್ಸು ಬರುವಂತಾದ್ದು ಇರುತ್ತದೆ, ಆಗ ಉತ್ಪಾದನೆಗೆ ಪೆಟ್ಟು ಬೀಳುವಂತಾದ್ದು ಇರುತ್ತದೆ ಆದ್ದರಿಂದ ಇದನ್ನೆಲ್ಲಾ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಅಲ್ಲದೇ ಹೋದರೆ ನಮಗೆ ಬರತಕ್ಕ ರೆವಿನ್ಯೂ ಬ್ಲಾಕ್ ಆಗುತ್ತದೆ. ಆದ್ದರಿಂದ ಅದರ ಮೇಲೆ ಏನು ಟ್ಯಾಕ್ಸ್ ಹಾಕಿದ್ದೇವೆ ಆ ಅಂಕಿಅಂಶ ನೋಡಿದರೆ ಸರಿಹೋಗುತ್ತದೆ ಇವೊತ್ತು ತಾವು ಒಟ್ಟು ಉತ್ಪಾದನೆ ಆಗತಕ್ಕದ್ದರ ಮೇಲೆ ಟ್ಯಾಕ್ಸ್ ಲೆಕ್ಕ ತೆಗೆದು ಕೊಂಡರೆ ಅದು ತಲೆಕೆಳಕಾಗುತ್ತದೆ. ತಾವು ಇದರಿಂದ ಸೋರಿ ಹೋಗುತ್ತದೆ ಎಂದು ಏನು ಹೇಳುತ್ತೀರಾ ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ನಿರ್ದಿಷ್ಟವಾಗಿ ಯಾವುದಾದರೂ ಹೇಳಿದರೆ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಒಳನಾಡಿನ ಸ್ಮಗಲ್ ವ್ಯವಹಾರ ಏನು ಇದೆ ಅದನ್ನು ತಡೆಗಟ್ಟಲಿಕ್ಕೆ ಬಹಳ ವಿಜಿಲೆಂಟ್‌ನಿಂದ ಇರುತ್ತೇವೆ ಎಂದು ಹೇಳುತ್ತೇನೆ. ಈಗ ಅನೇಕ ಮಾನ್ಯ ಸದಸ್ಯರು ಒಳ್ಳೆಯ ಸಲಹೆ, ಸೂಚನೆಗಳನ್ನು ಕೊಟ್ಟಿದ್ದಾರೆ ಅದಕ್ಕೆ ನಾನು ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಈಗ ಮಾನ್ಯ ಸದಸ್ಯರು ತಮ್ಮ ಸಲಹೆ ಕೊಡುವುದು ಮುಗಿಸಿದ್ದಾರೆ ಇನ್ನು ಒಪ್ಪಿಗೆ ಕೊಡುವುದು ಮಾತ್ರ ಇದೆ. ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕು ಎಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಕ್ಲೋರಾಲ್ ಹೈಡ್ರೇಟ್ ಸೀಸ್ ಮಾಡಿದ್ದೇವೆ ಎಂದು ಹೇಳಿದಿರಿ ಅದನ್ನು ಕಾಂಪೌಂಡ್ ಮಾಡಿದ್ದೀರಾ ತಿಳಿಸಬೇಕು?

ಶ್ರೀ ಆರ್.ಎಸ್. ಪಾಟೀಲ್.—ಅದು ಇನ್ನು ಕಂಪ್ಲೀಟ್ ಇನ್‌ವೆಸ್ಟಿಗೇಷನ್ ಆಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈಗ ಮೇ ತಿಂಗಳ ವಿಚಾರ ಹೇಳಿದಿರಿ ಇದು ಒಂದೇ ಪ್ರಕರಣವೇ ಅಥವಾ ಈ ಕ್ಲೋರಾಲ್ ಹೈಡ್ರೇಟ್ ಸೀಜ್ ಮಾಡಿರ ತಕ್ಕದ್ದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇದೆಯೋ, ಆ ರೀತಿ ಏನಾದರೂ ಹೆಚ್ಚಿನ ಪ್ರಮಾಣದಲ್ಲಿ ಸೀಜ್ ಮಾಡಿದ್ದರೆ ತಿಳಿಸಬೇಕು. ಇನ್ನು ಮೊನ್ನೆ ಸೀಜ್ ಆಗಿರತಕ್ಕಂತಾದ್ದನ್ನು ತಿಳಿಸಿದಿರಿ, ಅದು ಯಾರ ಲಾರಿ, ಅದು ಯಾರಿಗೆ ಸಂಬಂಧಪಟ್ಟಿದ್ದು ಎನ್ನುವುದನ್ನು ತಿಳಿಸಬೇಕು. ಇನ್ನು ರೆಕ್ಟಿಫೈಡ್ ಸ್ಪಿರಿಟ್ ಅರೇಕ್ ಮಾಡತಕ್ಕದ್ದಕ್ಕೆ ಯಾವ ಯಾವ ಸಂಸ್ಥೆಗಳಿಗೆ ಪರವಾನಿಗೆ ಕೊಟ್ಟಿದ್ದೀರಿ. ಮಂಡ್ಯ ಜಿಲ್ಲೆಯವರು ಎಷ್ಟು ಜಿಲ್ಲೆಗಳಿಗೆ ವಿತರಣೆ ಮಾಡುತ್ತಿದ್ದಾರೆ. ಇನ್ನು ನಮ್ಮದೇ ಆದಂತಹ ಸಹಕಾರ ರಂಗದ ಸಂಸ್ಥೆ ಸಂಕೇಶ್ವರದಲ್ಲಿ ಏನು ಇದೆ ಅದು ಎಷ್ಟು ತಯಾರು ಮಾಡುತ್ತಿದೆ. ಅವರು ಅರೇಕ್ ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದಾರೆ ಅವರಿಗೆ ಮಾಡುವ ಎಬಿಲಿಟಿ ಇಲ್ಲವೇ ? ಈಗ ಜೆಮಿನಿಯವರು ೯ ಲಕ್ಷ ಲೀಟರ್ ಆರ್.ಎಸ್. ಉತ್ಪಾದನೆ ಮಾಡುತ್ತಾರೆ ಎಂದು ಹೇಳಿದಿರಿ. ಮಂಡ್ಯ ೯೬ ಲಕ್ಷ ಚಿಲ್ಲರೆ ಲೀಟರ್ ಎಂದು ಹೇಳಿದಿರಿ. ಈ ಸಂಸ್ಥೆಯವರಿಗೆ ಮಾಡುವುದಕ್ಕೆ ಶಕ್ತಿ ಇಲ್ಲವೇ ? ಇದರ ಜೊತೆಗೆ ಅಗ್ರಿಮೆಂಟ್ ಆಗಿಲ್ಲ ಎನ್ನುವುದರ ಮೇಲೆ ರದ್ದಾಗಿದೆಎಂದು ಹೇಳುವುದು ನಿಜವೇ ಅಥವಾ ಇಲ್ಲವೇ ತಿಳಿಸಬೇಕು. ಈಗ ಸರ್ವೀಸ್ ಚಾರ್ಜಸ್ ೨೫ ಪೈಸೆ ಕೊಡತಕ್ಕದ್ದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ ಎನ್ನುವ ಒಂದು ಕಾರಣದಿಂದ ಅಕೌಂಟೆಂಟ್ ಜನರಲ್ ಅವರು ಎತ್ತಿದ ಒಂದು ಕ್ರಿಯಾಲೋಪದ ಆಧಾರದ ಮೇಲೆ ರದ್ದಾಗಿದೆ ಎನ್ನುವ ವಿಚಾರ ಬಂದಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ನಮಗೆ ಸರಿಯಾದ ಇನ್‌ಫರ್‌ಮೇಷನ್ ಕೊಡಬೇಕು. ಅದು ಸರಿ ಇದ್ದರೆ ಸರಿ ಎಂದು ಹೇಳಲಿ, ಇಲ್ಲದೆ ಇದ್ದರೆ ಇಲ್ಲ ಎಂದು ಹೇಳಲಿ. ಇನ್ನು ಮಾನ್ಯ ಮಂತ್ರಿಗಳು ರೆಕ್ಟಿಫೈಡ್ ಸ್ಪಿರಿಟನ್ನು ಅವರು ಎಲ್ಲಿ ಅರೇಕ್ ಮಾಡುತ್ತಾರೆ ಆ ಜಾಗದಲ್ಲಿ ಕೊಂಡೊಯ್ಯುವುದಕ್ಕೆ ಟ್ರಾನ್ಸ್‌ಪೋರ್ಟ್ ಚಾರ್ಜ್, ಅದನ್ನು ಮಿಕ್ಸ್ ಮಾಡತಕ್ಕದ್ದಕ್ಕೆ ಅರೇಕ್ ತಯಾರು ಮಾಡಿದ ಮೇಲೆ ಸೆಲ್ಲಿಂಗ್ ಪಾಯಿಂಟ್ ಡಿಪೋಗಳಿಗೆ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಇಷ್ಟು ಸೇರಿ ೨೦ ಪೈಸೆ ಎಂದು ಹೇಳಿದರು. ಆದುದರಿಂದ ಈ ಬಗ್ಗೆ ತಮ್ಮ ಅಧಿಕಾರಿಗಳಿಂದ ವತ್ತುಷ್ಟು ವಿವರಣೆ ತರಿಸಿಕೊಂಡು ಹೇಳಬೇಕು. ಏಕೆಂದರೆ ನಾನು ನಿಮ್ಮಿಂದ ವಿಷಯ ತಿಳಿದುಕೊಳ್ಳಬೇಕಾಗಿದೆ. ಇವೊತ್ತು ನಿಮ್ಮ ಷರತ್ತುಗಳನ್ನು ಏನು ಹಾಕಿದಿರಿ, ಆ ಷರತ್ತುಗಳಿಗನುಗುಣವಾಗಿ ನಡೆದಿಲ್ಲ. ಈ ಸಂಸ್ಥೆಗೆ ಕೊಡುವ ಕಾಲದಲ್ಲಿ, ಕೊಡುವುದು ಇನ್ನೂ ಪೂರ್ಣವಾಗಿ ನಿರ್ಣಯ ಆಗುವುದಕ್ಕೆ ಮುಂಚೆಯೇ ಮಂಡ್ಯದಲ್ಲಿ ನಮ್ಮದೇ ಆದಂತಹ ಸರ್ಕಾರಿ ಸಂಸೆ ಡಿಸ್ಟಿಲರಿಯವರು ನಾವೇ ಇದನ್ನು ಮಾಡುತ್ತೇವೆ ನಮಗೆ ಇದನ್ನು ಕೊಡಿ ೧೫ ಪೈಸೆಯಲ್ಲಿ ಮಾಡುತ್ತೇವೆ ಎಂದು ಅವರು ಏನಾದರೂ ಕೊಟ್ಟಿದ್ದಾರೆಯೋ ? ಅವರು ಕೊಡದೇ ಇದ್ದರೆ ಕೊಟ್ಟಿಲ್ಲ ಎಂದು ತಿಳಿಸಿ. ಅವರು ಕೊಟ್ಟಿರತಕ್ಕದ್ದು ಮುಂದೆ ಇದ್ದರೂ ಪರಿಗಣನೆಗೆ ತೆಗೆದುಕೊಳ್ಳದೇ ಡೀಲ್ ಕೊಟ್ಟಿದ್ದರೆ ತಿಳಿಸಬೇಕು.

ಸರ್ಕಾರಕ್ಕೆ ಇದರಿಂದ ಬಹಳ ನಷ್ಟವಾಗಿದೆ. ತಾವು ಕೆಲವು ವಿಚಾರದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಂಡಿದ್ದೀರೆಂದು ತಿಳಿದು ಬಂದಿದೆ. ಇವತ್ತು ಸರ್ಕಾರಕ್ಕೆ ಇದರಿಂದ ಕೋಟ್ಯಾಂತರ ರೂಪಾಯಿಗಳು ಕ್ರಮವಾಗಿ ಪೋಲಾಗುತ್ತದೆ ಎಂದು ಕಂಡು ಬಂದರೆ ಕ್ರಮ ತೆಗೆದುಕೊಳ್ಳಬೇಕು. I don't want to take the time of the House unnecessarily. In case there is any loss of revenue to the State let the Government take a decision, ಅಗ್ರಿಮೆಂಟ್ ರದ್ದಾದಮೇಲೆ ಸರ್ವೀಸ್ ಚಾರ್ಜ್ ಕೊಟ್ಟು ಈ ಸಂಸ್ಥೆಗೆ ಬಿಟ್ಟಿದ್ದೇವೆಂದು ಹೇಳಿದ್ದೀರಿ, ೨೦ ಪೈಸೆ ಬಂದಿದ್ದನ್ನು ನೀವು ಏತಕ್ಕೆ ಒಪ್ಪಬಾರದಾಗಿತ್ತು ? ಗತ್ಯಂತರ ಇಲ್ಲದೆ ಒಪ್ಪಬಹುದೆಂದು ಮಾನ್ಯ ಸಚಿವರು ಹೇಳಿದರು. ಆಫರ್ ಎಂದು ಕರೆದಿದ್ದೀರಿ. Has it been notified, when the offers were received ? ದಯಮಾಡಿ ಈ ಸಭೆಗೆ ತಿಳಿಸಬೇಕು. ತಾವು ಮಂತ್ರಿಗಳಾಗಿ ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ. ರಾಷ್ಟ್ರಪತಿಯವರ ಆಡಳಿತ ಕಾಲದಲ್ಲಿ ಮತ್ತೆ ಇದನ್ನು ಕೊಡುವ ಬಗ್ಗೆ ಆಫರ್ಸ್ ಕರೆದಿದ್ದೆವು, ಆಫರ್ಸ್ ಬಂದಿದ್ದು ಪರಿಶೀಲನೆ ಮಾಡಿದ್ದೇವೆಂದು ಹೇಳಿದ್ದೀರಿ. When it has been notified ? When you have received the offers ? How many contractors have given their offers so far as this manufacture of arrack and its transportation to the distribution point is concerned. ಎಷ್ಟು ಜನ ಎಕ್ಸೈಜ್ ಕಂಟ್ರಾಕ್ಟರ್ಸ್‌ಗೆ ಆಫರ್ ಕೊಟ್ಟಿದ್ದೀರಿ, ಯಾವಾಗ ಕೊಟ್ಟಿದ್ದೀರಿ?

ರೇಟ್ಸ್ ಏನು ದಯುಮಾಡಿ ತಿಳಿಸಬೇಕು, ನಿನ್ನೆ ನಾನು ಹೇಳಿದೆ. The Excise Commissioner has recommended— I have not said the Government has decided—The Excise Commissioner has recommended to continue this deal upto 1981 at 20 paise and from 1981-84 at 24 paise or so. This is what the information I have secured and I want to elicit from the Hon. Minister further on these points. ಇದು ಇದ್ದರೆ ಇಲ್ಲ ಅಂತ ಹೇಳಿ. ಇನ್ನು ಟೆಕ್ನಿಕಲ್ ಕಮಿಟಿ ಅಪಾಯಿಂಟ್ ಮಾಡಿದ್ದೇವೆಂದು ಹೇಳಿದ್ದೀರಿ, ಯಾವಾಗ ನೇಮಕ ಮಾಡಿದಿರಿ ? ಆ ಕಮಿಟಿ ಸದಸ್ಯರು ಯಾರು ಯಾರು? ಯಾವ ತಾರೀಖಿನಲ್ಲಿ ಈ ಟೆಕ್ನಿಕಲ್ ಕಮಿಟಿ ನೇಮಕ ಮಾಡಿದಿರಿ? ಟೆಕ್ನಿಕಲ್ ಕಮಿಟಿ ಅಭಿಪ್ರಾಯ ಇಲ್ಲದೆ ೫ ಪರ್ಸೆಂಟ್ ಸ್ಟೋರೇಜ್ ಮಾಡುವುದಕ್ಕೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ, ತಾವು ಇದರ ಬಗ್ಗೆ ವಿವರಣೆ ಕೊಡುತ್ತೀರೆಂದು ಭಾವಿಸಿಕೊಂಡಿದ್ದೇನೆ.

ಶ್ರೀ ಆರ್.ಎಸ್. ಪಾಟೀಲ್.—ಕ್ಲೋರಾಲ್ ಹೈಡ್ರೇಟ್ ಕಾಂಪೌಂಡ್ ಮಾಡಿದ್ದೀರಿ ಇದರ ವರ್ತಮಾನ ಬಂದಿದೆ ಎಂದು ಹೇಳಿದ್ದೀರಿ. ಇದು ೧೦-೫-೧೯೭೮ರಲ್ಲಿ ಸೀಸ್ ಮಾಡಿದ್ದು. ಸುಮಾರು ೮೦೦೦ ಕೆ.ಜಿ. ಎಂದು ಏನು ಹೇಳಿದ್ದೀರಿ ಇದು ೧೯೭೭ರಲ್ಲಿ ಆದ ಘಟನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

SRI H. D. DEVE GOWDA.—You please make a detailed statement later. I want to know who are the persons who are behind this racket? ಪೂರ್ಣ ಮಾಹಿತಿಯನ್ನು ತರಿಸಿ ವಿವರಣೆ ಕೊಡಿ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಕೊನೆ ಪಕ್ಷ ಇದರ ಬಗ್ಗೆ ಯಾದರೂ ಕೂಡ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಬಡ ಜನತೆಗೆ ಕೊಡತಕ್ಕ ಅರಾಕ್‌ನಲ್ಲಿ ಮನಸ್ವೇಚ್ಛೆ ಕಲಬೆರಕೆ ಮಾಡಿ ಕೊಡುತ್ತಿದ್ದಾರೆ, ಇದರ ಬಗ್ಗೆ ನನ್ನ ಕಳಕಳಿ ವ್ಯಕ್ತಪಡಿಸುತ್ತಿದ್ದೇನೆ. ಪ್ರಾಹಿಬಿಷನ್ ಪಾಲಿಸಿ ಬಗ್ಗೆ ನಾನು ಇವತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. I want to know Why it has compounded ? Who is the person involved in this scandal ?

ಶ್ರೀ ಆರ್. ಎಸ್. ಪಾಟೀಲ್,—ಲಾರಿ ನಂಬರ್ ಹೇಳಿ ಎಂದು ಹೇಳಿದ್ದೀರಿ. ಇದು ಟ್ರಾನ್ಸ್‌ಪೋರ್ಟ್ ಗೋಡೌನ್‌ನಲ್ಲಿ ಸೀಸ್ ಮಾಡಿದ್ದು. ಮತ್ತೆ ರೆಕ್ಟಿಫೈಡ್ ಸ್ಪಿರಿಟ್ ಅರೇಕ್‌ಮಾಡತಕ್ಕದ್ದಕ್ಕೆ ಯಾವ ಯಾವ ಸಂಸ್ಥೆಗಳಿಗೆ ಪರವಾನಿಗಿ ಕೊಟ್ಟಿದ್ದೀರಿ ಎಂದು ಕೇಳಿದ್ದೀರಿ, ತಾವೇ ಹೇಳಿದಂತೆ ಜೆಮಿನಿ ಡಿಸ್ಟಿಲರೀಸ್ ೯ ಲಕ್ಷ ಲೀಟರ್ಸ್ ಉತ್ಪಾದನೆ ಮಾಡುತ್ತಾರೆ ಇದಕ್ಕೆ ಇನ್ನೂ ಹೆಚ್ಚು ಮಾಡುವ ಕ್ಯಪಾಸಿಟಿ ಇದೆ ಎಂದು ತಾವೇ ಹೇಳಿದ್ದೀರಿ, ಮಂಡ್ಯ ಡಿಸ್ಟಿಲರೀಸ್ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಪರಿಶೀಲನೆ ಮಾಡಿ ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಕೆಲವು ವಿವರಣೆಗಳು ಈ ಸದನಕ್ಕೆಬಹಳ ಅವಶ್ಯಕವಾಗಿದೆ. ಸರ್ಕಾರದ ವ್ಯವಹಾರ ಸೂತ್ರವನ್ನು ಹಿಡಿದಿರತಕ್ಕ ಮುಖ್ಯ ಮಂತ್ರಿಗಳು ಕೂಡ ಇದರ ಬಗ್ಗೆ ಹೇಳಬೇಕಾಗುತ್ತದೆ. ನಾವು ಏನೇನು ಮಾಹಿತಿಗಳನ್ನು ಕೇಳಿದ್ದೇವೆ, ಅವುಗಳನ್ನು ಕೂಡಲೇ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಪೂರ್ಣ ವಿವರಣೆಯನ್ನು ಈ ಅಧಿವೇಶನ ಮುಂದಕ್ಕೆ ಹೋಗುವುದಕ್ಕಿಂತ ಮುಂಚೆ ಈ ಸದನದ ಮುಂದೆ ಇಡುತ್ತೇನೆಂದು ಹೇಳಿ. I can understand your difficulty. I want to know whether you are prepared to make a detailed statement. ಈಗ ಮಂಡ್ಯ ಡಿಸ್ಟಿಲರೀಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಸರ್ಕಾರದ ವಶಿಯಿಂದಲೇ ನಡೆಯುತಕ್ಕ ಕಂಪೆನಿ, ಇವರು ೧೫ ಪೈಸೆಯಂತೆ ಸಾಗಿಸುವ ಬಗ್ಗೆ ಪತ್ರ ಬರೆದಿದ್ದಾರೆ ? ಅದರ ಬಗ್ಗೆ ವಿವರಣೆ ಕೊಟ್ಟಿಲ್ಲ. ನಿನ್ನೆ ನಾನು ಕೇಳಿದ ಪ್ರಶ್ನೆಗಳು ಮತ್ತು ಇವತ್ತು ನಾವು ನಿಮ್ಮಿಂದ ಅಪೇಕ್ಷೆ ಮಾಡಿದ ಉತ್ತರಗಳು ಇದರ ಬಗ್ಗೆ ಸಂಪೂರ್ಣವಾದ ವಿವರಣೆಯನ್ನು ತರಿಸಿ ಈ ಅಧಿವೇಶನ ಮುಂದೂಡುವುದಕ್ಕೆ ಮುಂಚೆ ಸ್ಟೇಟ್‌ಮೆಂಟ್ ಮಾಡಿದರೆ ಈ ಸದನ ತನ್ನ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಅಗ್ರಿಮೆಂಟ್ ರದ್ದು ಮಾಡಿದ್ದೀರಿ ಎಂದು ಹೇಳಿದ್ದೀರಿ, ಅದು ಅಗ್ರಿಮೆಂಟ್ ಅನುಸಾರವಾಗಿ ಮೂರು ವರ್ಷದಿಂದ ಬಂದಿದೆ, ವಿವರ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗಲೇ ಬೇಕೂಂತ ಆತುರ ಏನೂ ಇಲ್ಲ, ತಮ್ಮ ಗಮನಕ್ಕೆ ಬಾರದೆ ಎಷ್ಟೋ ನಡೆದಿದೆ. The decision taken by the Government at that time was to give only to 19 districts. But the Excise Commissioner has given to two districts without the approval of the Government. How can the Excise Commissioner do it, is he competent to do it ? ಈ ಸದನಕ್ಕೆ ವರದಿ ಕೊಡುವಾಗ, ಮಾಹಿತಿ ಕೊಡುವಾಗ, ದಯಮಾಡಿ ಎಲ್ಲಾ ವಿವರಗಳನ್ನು ಕೊಡಿ, ನಿನ್ನೆ ಸಂಜೆ ಹೇಳಿದ್ದೇವೆ, ಕೆಲವು ಸಿಕ್ಕದೇ ಇರಬಹುದು. Please try to ascertain all the information and then make a detailed statement.

ಶ್ರೀ ಎಸ್.ಆರ್. ಬೊಮ್ಮಾಯಿ.—ಟೋಟಲ್ ಪ್ರೊಡಕ್ಷನ್ ಆಫ್ ಬೀರ್ ಇನ್ ದಿ ಸ್ಟೇಟ್ ಎಷ್ಟು ಆಗುತ್ತದೆ ಇದರ ಬಗ್ಗೆ ಅಂಕಿ ಅಂಶಗಳನ್ನು ಕೊಡಬೇಕು. ತಮ್ಮ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ ನಮ್ಮ ರಾಜ್ಯದಲ್ಲಿ ಕನ್‌ಸಮ್‌ಷನ್ ಆಗತಕ್ಕಂಥದ್ದರ ಮೇಲೆ ಟ್ಯಾಕ್ಸ್ ಜಾಸ್ತಿ ಇರುತ್ತದೆ, ಹೊರ ರಾಜ್ಯಗಳಿಗೆ ಹೋಗತಕ್ಕಂಥ ಲಿಕ್ಕರ್ಸ್‌ಗೆ ಟ್ಯಾಕ್ಸ್ ಕಡಿಮೆ ಇರುತ್ತದೆಂದು ಹೇಳಿರುತ್ತೀರಿ. ಆದ್ದರಿಂದ ಹೊರಗಡೆ ಹೋಗತಕ್ಕಂಥ ಲಿಕ್ಕರ್ಸ್ ಎಷ್ಟು ಎಂದು ಕೇಳುತ್ತೇನೆ.

ಶ್ರೀ ಆರ್.ಎಸ್. ಪಾಟೀಲ್.—೫–೬ ಪಟ್ಟು ಕನ್‌ಸಂಷನ್‌ಗಿಂತ ಹೊರಗಡೆ ಹೋಗುವುದು ಜಾಸ್ತಿ ಇದೆ ಎಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ರಾಜ್ಯದಲ್ಲಿ ಕನ್‌ಸಮ್‌ಷನ್ ಆಗತಕ್ಕಂಥಾದಕ್ಕೆ ಟ್ಯಾಕ್ಸ್ ಜಾಸ್ತಿ ಇರುತ್ತದೆ, ಹೊರಗೆ ಹೋಗತಕ್ಕಂಥಾದ್ದಕ್ಕೆ ಟ್ಯಾಕ್ಸ್ ಜಾಸ್ತಿ ಆಗುವುದಿಲ್ಲವೆಂದು ಹೇಳಿದಿರಿ. ಆದ್ದರಿಂದ ಟೋಟಲ್ ಪ್ರೊಡಕ್ಷನ್ ಕಳೆದ ೫ ವರ್ಷದಿಂದ ಈ ರಾಜ್ಯದಲ್ಲಿ ಎಷ್ಟು ಆಗುತ್ತದೆ? ಎಷ್ಟು ಹೊರಗೆ ಹೋಗುತ್ತದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಐ.ಎಂ.ಎಫ್.ಎಲ್. ಟೋಟಲ್ ಪ್ರೊಡಕ್ಷನ್ ಎಷ್ಟು, ಯಾವ ಕ್ವಾಂಟಿಟಿಯಲ್ಲಿ ಎಕ್ಸ್‌ಪೋರ್ಟ್ ಆಗುತ್ತಿದೆ ಅದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೊಡುತ್ತೀರಾ ಮತ್ತು ಟ್ಯಾಕ್ಸ್ ರಿಕವರಿ ಎಷ್ಟು ಆಗುತ್ತದೆ ವಿವರ ತಿಳಿಸುತ್ತೀರಾ ?

ಶ್ರೀ ಆರ್.ಎಸ್. ಪಾಟೀಲ್.—ತಾವು ಕೇಳಿದ ಎಲ್ಲ ಪ್ರಶ್ನೆಗಳಿಗೂ ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಮೈಕೇಲ್ ಫರ್ನಾಂಡೀಸ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದು ಏನೆಂದರೆ ನಾನು ನೆನ್ನೆ ಮಾತನಾಡುವಾಗ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಮೇ ತಿಂಗಳು ೨೫ನೇ ತಾರೀಖಿನಂದು ಏನು ಒಂದು ಸುಮಾರು ೭೫ ಸಾವಿರ ಜನರಿಗೆ ಸಂಬಂಧಪಟ್ಟಂತೆ ಒಂದು ಸೆಟಲ್‌ಮೆಂಟ್ ಆಯಿತು, ಅದರ ಬಗ್ಗೆ ನಾನು ಡಿಪಾರ್ಟ್‌ಮೆಂಟ್‌ಗೆ ಕ್ರೆಡಿಟ್ ಕೊಟ್ಟಿಲ್ಲವೆಂದು ಹೇಳಿದರು. ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಇತ್ತು. ಆದರೆ ನಾನು ಬಹಳ ಮುಖ್ಯವಾಗಿ ಏತಕ್ಕೆ ಏನೂ ಹೇಳಲಿಲ್ಲವೆಂದರೆ ಅಲ್ಲಿ ಒಂದು ಕಾಂಟ್ರವರ್ಸಿ ಹುಟ್ಟಿದೆ, ಸೆಟಲ್‌ಮೆಂಟ್ ಆದನಂತರ ಕೆಲವು ಕಾರ್ಮಿಕರಲ್ಲಿ ಒಂದು ಕಾಂಟ್ರವರ್ಸಿ ಹುಟ್ಟಿದೆ. ಆದರಿಂದ ಅದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು, ಅಂದರೆ ಲೇಬರ್ ಕಮಿಷನರ್‌ರವರು, ಇಬ್ಬರು ಡೆಪ್ಯೂಟಿ ಲೇಬರ್ ಕಮಿಷನರ್‌ರವರೂ ಹಾಗೂ ಅವರ ಸಿಬ್ಬಂದಿ ವರ್ಗದವರು ಆವತ್ತಿನ ದಿವಸ ವಿಶೇಷ ರೀತಿಯಲ್ಲಿ ಸುಮಾರು ೧೮ ಗಂಟೆಗಳ ಕಾಲ ನೆಗೋಸಿಯೇಷನ್ ನಡೆಸಿದ ಸಂದರ್ಭದಲ್ಲಿ ಬೆಳಿಗ್ಗೆ ೧೧ ಘಂಟೆಯಿಂದ ಮುಂದಿನ ರಾತ್ರಿ ೪ ಘಂಟೆಯ ತನಕ ಅಲ್ಲೇ ಇದ್ದುದಕ್ಕೆ ಅವರ ಪೇಷನ್ಸ್ ಬಗ್ಗೆ ಮತ್ತು ಅವರ ಕಾರ್ಯತತ್ಪರತೆಗೆ ಯಾವ ವಿಧವಾದ ಸಂಕೋಚವೂ ಇಲ್ಲ. ನೆನ್ನೆ ಮಾತನಾಡುವಾಗ ಇದನ್ನು ಹೇಳದೆ ಇದ್ದುದರಿಂದ ಈವತ್ತು ಅಧ್ಯಕ್ಷರ ಮೂಲಕ ಅವರಿಗೆ ನನ್ನ ಶ್ಲಾಘನೆಯನ್ನು ಅರ್ಪಿಸುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಒಂದು ವರ್ಷದ ಸಾಧನೆಯನ್ನೇ ಮುಖ್ಯವಾಗಿ ಇಟ್ಟುಕೊಂಡು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳತಕ್ಕಂಥಾದ್ದಲ್ಲ. ಒಂದು ವರ್ಷದ ಸಾಧನೆಯನ್ನು ಹೇಳುವುದಾದರೆ ಅದು ಒಂದು ರೊಟೀನ್ ಬಜೆಟ್ ಆಗುತ್ತದೆ. ಆದ್ದರಿಂದ ಒಂದು ಲಾಂಗ್‌ರೇಂಜ್ ಬಜೆಟ್ ಇಟ್ಟುಕೊಂಡು. ಅದರಿಂದ ಒಂದು ದೂರದೃಷ್ಟಿಯ ಗುರಿಯನ್ನು ಸಾಧಿಸುವ ರೀತಿಯಲ್ಲಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಮಂತ್ರಿಯವರು ಒಂದು ವಿಚಾರವನ್ನು ಉತ್ತರ ಕೊಡುವಾಗ ಹೇಳಿದರು. ಕಂಪಲ್‌ಸರಿ ಡಿ.ಎ.ಯನ್ನು ಕಾರ್ಮಿಕರಿಗೆ ಕೊಡಬೇಕು ಎನ್ನುವಂಥ ಒಂದು ಸಂದರ್ಭದಲ್ಲಿ ಇಲ್‌ಲೀಗಲ್ ಅಗ್ರಿಮೆಂಟ್‌ಗಳಿಗೆ ಸೈನ್ ಆಗತಕ್ಕಂಥಾದ್ದು ಇರುತ್ತದೆ. ಮತ್ತು ಅಫೆನ್‌ಸೀವ್ ಕ್ಲಾಜ್‌ಗಳು ಹಾಕಿ ಅಗ್ರಿಮೆಂಟ್ ತೆಗೆದುಕೊಳ್ಳುತ್ತಿದ್ದಾರೆ. ಇದು ಆಗಬಾರದೆಂದು ಹೇಳುತ್ತಾ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬಾಂಡೆಡ್ ಲೇಬರ್ಸ್ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಾ ಕೆಲವು ಕೇಸಸ್‌ಗಳು ರಿಜಿಸ್ಟರ್ ಆಗಿರುತ್ತದೆ ಎಂದು ಹೇಳಿದರು. ೧೯೭೬-೭೭ನೇ ಸಾಲಿನ ರಿಪೋರ್ಟ್‌ನಲ್ಲಿ ಅಂಕಿ ಅಂಶಗಳನ್ನು ಕೊಟ್ಟಿರುತ್ತಾರೆ. ಆದರೆ ಕಳೆದ ವರ್ಷದ ರಿಪೋರ್ಟ್‌ನಲ್ಲಿ ಇದರ ಬಗ್ಗೆ ಏನು ಹೇಳಿಲ್ಲ. ಆದ್ದರಿಂದ ಮಾನ್ಯಮಂತ್ರಿಗಳು ಇದರ ಬಗ್ಗೆ ಏನು ಹೇಳುತ್ತಾರೆಂದು ಕೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಒಂದು ಸಮಸ್ಯೆ ಉದ್ಭವವಾಗಿರುತ್ತದೆ. ನಮ್ಮ ಕರ್ನಾಟಕದಲ್ಲಿಯೇ ಹುಟ್ಟಿ ಬೇರೆ ಕಡೆಗೆ ಹೋದರೆ ಸೆಂಟ್ರಲ್ ಎಂಪ್ಲಾಯೀಸ್ ಅಂದರೆ ರೈಲ್ವೆ ಮತ್ತು ಪೋಸ್ಟಲ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಬೇರೆ ಕಡೆಗೆ ವರ್ಗವಾಗಿ ಮತ್ತೆ ಅವರು ವಾಪಸ್ ಬಂದರೆ ಅವರು ಬೇರೆ ರಾಜ್ಯದವರೆಂದು ಹೇಳಿ ಅವರ ಮಕ್ಕಳನ್ನು ರಿಜಿಸ್ಟ್ರೇಷನ್ ಮಾಡುತ್ತಿಲ್ಲ. ಇಂಥ ಒಂದು ಸಮಸ್ಯೆ ಉಂಟಾಗಿರುತ್ತದೆ. ಆದ್ದರಿಂದ ಎಲ್ಲ ರಾಜ್ಯದ ಲೇಬರ್ ಮಂತ್ರಿಗಳೂ ಒಂದು ಕಾನ್‌ಫರೆನ್ಸ್ ಇಟ್ಟುಕೊಂಡು ರೆಸಿಪ್ರೋಕಲ್ ಬೇಸಿಸ್‌ಮೇಲೆ ಈ ಒಂದು ಸಮಸ್ಯೆಯನ್ನು ಇತ್ಯರ್ಥಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಚುನಾಯಿತರಾದ ಪ್ರತಿನಿಧಿಗಳಿಗೆ ಎಕ್ಸ್‌ಚೇಂಜ್‌ನಲ್ಲಿ ಜವಾಬ್ದಾರಿಕೊಟ್ಟು ಈ ಡಿಪಾರ್ಟ್‌ಮೆಂಟ್‌ನ್ನು ಡೈನಾಮಿಕ್ ಆಗಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ತಾವು ಡಿ.ಎ. ವಿಷಯವಾಗಿ ತಾವು ಹೇಳಿದರ ಬಗ್ಗೆ ಹೇಳುವುದಾದರೆ ಕೆಲವು ಮುಖ್ಯ ಕೈಗಾರಿಕೆಗಳು ಮೈಕೋ ಮುಂತಾದ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಮತ್ತು ಸ್ಟೇಟ್ ಇಂಡಸ್ಟ್ರೀಸ್‌ಗಳಲ್ಲಿ ಲಿಂಕಿಂಗ್ ಆಫ್ ದಿ ಡಿ.ಎ. ಇದನ್ನು ಪ್ರೈಸ್ ಇನ್‌ಡೆಕ್ಸ್ ಆಧಾರದ ಮೇಲೆ ಮಾಡಲಾಗಿದೆ. ಟೆಕ್ಸ್‌ಟೈಲ್ ಇಂಡಸ್ಟ್ರೀಸ್‌ಗಳಲ್ಲೂ ಇದು ಜಾರಿಯಲ್ಲಿರುತ್ತದೆ. ಎಲ್ಲ ಉದ್ಯಮಗಳ ಬಗ್ಗೆಯೂ ಏನು ವಿಚಾರವನ್ನು ಹೇಳಿರುತ್ತೀರಿ ಅದನ್ನೆಲ್ಲ ಪರಿಶೀಲನೆ ಮಾಡುತ್ತೇನೆ.

ಇನ್ನು ಇಲ್‌ಲೀಗಲ್ ಅಗ್ರಿಮೆಂಟ್‌ಗೆ ಸೈನ್ ಹಾಕತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಅಂಥಾದ್ದು ಯಾವುದಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ರಿಜಿಸ್ಟ್ರೇಷನ್ ವಿಷಯವಾಗಿ ಏನು ಹೇಳಿರುತ್ತೀರಿ ಇದು ಬಹಳ ಮಹತ್ವದ್ದು ಇರುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಹುಟ್ಟಿದವರು ಕೇಂದ್ರ ಸರ್ಕಾರದ ಸೇವೆಯಲ್ಲಿದ್ದು ವಾಪಸ್ ಕರ್ನಾಟಕಕ್ಕೆ ಬಂದಾಗ ಅವರ ಮಕ್ಕಳ ರಿಜಿಸ್ಟ್ರೇಷನ್ ಮಾಡದೆ ಇರತಕ್ಕಂಥ ಪ್ರಸಂಗ ಏನು ಇರುತ್ತದೆ ಅದನ್ನೂ ಕೂಡ ತಾವು ನನ್ನ ಗಮನಕ್ಕೆ ತಂದಿರುತ್ತೀರಿ. ಅದನ್ನು ಪರಿಶೀಲಿಸಿ ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ಅಧ್ಯಕ್ಷರೆ ನಾನು ಒಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ನೇಕಾರರ ಸಮಸ್ಯೆ ಏನು ಇರುತ್ತದೆ ಇದು ಮಾನ್ಯ ಮಂತ್ರಿಗಳಿಗೆ ಸಾಕಷ್ಟು ಗೊತ್ತಿರಬಹುದು. ಈ ಉದ್ಯಮದಲ್ಲಿ ತೊಡಗಿರತಕ್ಕಂಥವರಿಗೆ ಒಂದು ನಿಗದಿಯಾದ ವೇತನವಿರುವುದಿಲ್ಲ. ಈ ಒಂದು ದೃಷ್ಟಿಯಿಂದ ಅವರ ಪರಿಸ್ಥಿತಿ ಬಹಳ ಶೋಚನೀಯವಾಗಿರುತ್ತದೆ. ಆದ್ದರಿಂದ ಒಂದು ಕನಿಷ್ಟ ವೇತನವನ್ನು ನಿಗಧಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ತಾವು ಹೇಳಿದ ವಿಷಯವನ್ನು ಉತ್ತರ ಕೊಡುವಾಗ ಹೇಳುವುದು ಮರೆತುಬಿಟ್ಟಿದ್ದೆ. ಇದು ಮಿನಿಮಮ್ ವೇಜಸ್ ಆಕ್ಟ್‌ನಲ್ಲಿ ಬರುತ್ತದೆ. ಮಿನಿಮಮ್ ವೇಜಸ್ ನಿಗದಿ ಮಾಡತಕ್ಕಂಥ ಸಮಿತಿ ತನ್ನ ವರದಿ ಸಲ್ಲಿಸಿದ ನಂತರ ಇದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಪಿ. ರಾಮದೇವ್.—ಸೇಂದಿಯನ್ನು ಮಾರಾಟ ಮಾಡುವಾಗ ಕ್ಲೋರಲ್ ಹೈಡ್ರೇಟ್ಸ್ ಮಿಕ್ಸ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದು ಏತಕ್ಕೆಂದರೆ ಒಂದು ರೀತಿಯಾದ ಮತ್ತು ಬರಲಿ ಎಂಬ

ಉದ್ದೇಶವಿರುತ್ತದೆ. ಈ ಕ್ಲೋರಲ್ ಹೈಡ್ರೇಟ್ ಒಂದು ರೀತಿಯಾದ ಪಾಯಿಸನ್ ಕಂಟೆಂಟ್ಸ್ ಹೊಂದಿರುತ್ತದೆಂದು ತಮಗೆ ಗೊತ್ತಿರುತ್ತದೆ. ಈ ರೀತಿ ತಿಳಿದೂ ಕೂಡ ಇದನು ಬೆರೆಸಿ ಸೇಂದಿಯನ್ನು ಜನಕೆ ಕೊಡುತ್ತಿರುವುದು ಸರ್ಕಾರದ ನೀತಿಯೇ ಎಂದು ಕೇಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಇದು ನೀತಿಯಲ್ಲ. ದುಷ್ಟ ಜನ ಈ ರೀತಿ ಮಾಡುತ್ತಿದ್ದಾರೆ. ಇದು ಒಂದು ರೀತಿಯ ಕಿಕ್ ಬರಲಿ ಎನ್ನುವ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ಇದು ಎಷ್ಟರಮಟ್ಟಿಗೆ ನಿಜವೋ ನನಗಂತೂ ಗೊತ್ತಿಲ್ಲ. ವಿಷಮಿಶ್ರಿತ ಸೇಂದಿಯನ್ನು ಮಾರಾಟ ಮಾಡಬೇಕೆಂಬುದು ಸರ್ಕಾರದ ನೀತಿಯಲ್ಲವೆಂದು ಹೇಳುತ್ತೇನೆ.

SRI S. LAKSHMI SAGAR.—I have read in the press that the State Government sponsored a study of the socioconomic impact of drinking on the weaker section. Has such report been made and if so will it be placed on the Table of the House?

SRI R. S. PATIL.—I don't have any idea of such report. I will look into it.

SRI R. S. BOMMAI.—I have referred to the inspection by the Commeicial Tax Officers and the Minister's reply was very disappointing. I will give the date and letter No. The contents would show how the Commercial Tax Officiers were prevented from entering the premises of a distillery and how they were thrown out. The letter was written by the Deputy Commissioner, Commercial Taxes. (Intelligence), Southern Zone-Dated 4th September, 1976 No. D.O. DC/INT/PA/10/76-77. This letter is addressed to the Secretary and the Commissioner of Commercial Taxes. It was sent to Sri R. A. Naik, the then Commissioner. We are not questioning Sri R. S. Patil The Government is continuous. The Government must be prepared to answer theses questions. We want to know what action has been taken by the Government.

SRI B. BASAVALINGAPPA.—This is a matter of official correspondence and how my hon'ble Friend was able to get this official correspondence and if that could be enlightened, we will be greatful.

SRI S. R. BOMMAI.—As a member of this House, I am entitled to get information from all sources and I am not bound to disclose the source. We have got our own means. We have got our own agencies The contents of that letter would show that under the KST Act, they are entitled to enter the premises and make surprise visits and inspections and they have gone and inspected and found in number of places, duplicate account books and also incriminating papers. They have also positively said that that tax has been avoided; unaccounted liquors were there and a detailed letter has been written by them to show how the Officers were prevented from doing their public duty. The point is, the Officers of the Excise Department obeyed the orders of the owner of the distillery, the Managing Director. He directed the Excise Officers to direct the Commercial

Taxes Officers not to have the inspection. Accordingly, they acted. I don't want to go into the details of this letter. In the letter they have graphically described how they were driven out and how they were prevented from doing their public duty and if Excise Department comes in the way of proper inspection and recovery of the taxes, what is the action the Hon'ble Minister is going to take against those people? Supposing if he is not able to get the detailed information because I have raised it only yesterday, let him take time and inform this House about the action taken.

ಶ್ರೀ ಆರ್. ಎಸ್. ಪಾಟೀಲ್.—ನಾನು ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳಲಿಲ್ಲಾ. ಅವರಿಗೆ ಅಧಿಕಾರ ಉಂಟು. ಅವರಿಗೆ ಸರ್‌ಪ್ರೈಸ್ ಆಗಿ ಹೋಗಿ ಚೆಕ್ ಮಾಡುವುದಕ್ಕೆ ಮತ್ತು ಸರ್ಚ್ ಮಾಡುವುದಕ್ಕೆ ಅಧಿಕಾರ ಉಂಟು. ಆದರೆ ಇವರು ಯಾವ ಮಾರ್ಗದಲ್ಲಿ ಹೋಗಬೇಕು ಅನ್ನುವುದನ್ನು ಅನುಸರಿಸಬೇಕಾಗಿತ್ತು. ಅಲ್ಲಿ ಡಿಸ್ಟಲರೀಸ್‌ನಲ್ಲಿ ಯಾವ ಆಫೀಸರ್ ಇದ್ದಾರೆ ಅವರ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು. ಅವರು ಚೆಕ್ ಮಾಡುವುದಕ್ಕೆ ಒಳಕ್ಕೆ ಹೋದಾಗ ಅವರು ತಾವೇನಾದರೂ ಪರ್ಮೀಷನ್ ತೆಗೆದುಕೊಂಡು ಬಂದಿದ್ದೀರಾ ಎಂದು ಏನಾದರೂ ಕೇಳಿರಬೇಕು. ಒಮ್ಮೆಲೇ ಹೋದದ್ದರಿಂದ ಏನು ಮಾರ್ಗ ಅನುಸರಿಸಬೇಕೋ ಆ ಮಾರ್ಗದಲ್ಲೇ ಹೋಗದೇ ಇದ್ದುದರಿಂದ ಹೊಡೆದಾಡಿರಬೇಕು. ಆದರೆ ತಾವು ಹೇಳಿದಂಥಾ ಪತ್ರದ ವಿಷಯ ನನ್ನ ಗಮನಕ್ಕೆ ಬಂದಿಲ್ಲಾ. ಅವನು ಏನು ಬರೆದಿದ್ದಾನೋ ಗೊತ್ತಿಲ್ಲ. ಇವರು ಆ ಆಫೀಸರ ಪರ್ಮಿಷನ್ ಅನ್ನು ತೆಗೆದುಕೊಳ್ಳದೇ ಮನೆ ಒಳಕ್ಕೆ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಹೋಗಿರುವುದರಿಂದ ಅದನ್ನು ಅವರು ತಿಳಿಸಿರಬೇಕು.

SRI S. R. BOMMAI.—If the Hon. Minister has no knowledge of the letter, let him not comment on the letter.

ಶ್ರೀ ಆರ್. ಎಸ್. ಪಾಟೀಲ್.—ನೀವು ಹೇಳಿದ್ದು ಹಾಗೆ ಇದೆ ಹೀಗೆ ಇದೆ, ಅವನು ಲೆಟರ್ ಬರೆದಿದ್ದಾನೆ ಎಂದು ಹೇಳಿದಿರಿ. ನಾನು ಅದರ ವಾಸ್ತವಾಂಶ ಏನು ಇದೆ ಅನ್ನುವುದನ್ನು ತಮ್ಮ ಮುಂದೆ ಇಟ್ಟಿದ್ದೇನೆ.

SRI S. R. BOMMAI.—Specific allegations have been made by that Officer and he explained how he has acted according to law and how the Excise Officers came in his way. He has narrated the entire provisions of the law and the action taken by them. If you have knowledge of the letter, please tell us...

ಶ್ರೀ ಆರ್. ಎಸ್. ಪಾಟೀಲ್.—ಅವನು ತನ್ನ ಹದ್ದು ಮೀರಿ ವರ್ತಿಸಿದ್ದರೆ ಖಂಡಿತವಾಗಿಯೂ ಆಕ್ಷನ್ ತೆಗೆದುಕೊಳ್ಳುತ್ತೇನೆ.

SRI A. LAKSHMI SAGAR.—I should like to ask from the Hon. Minister whether there are provisions under the Karnataka Sales Tax Act empowering the Intelligence Department of the Commercial Taxed Officer to make a surprise inspection. I am surprised, I am amazes at the explanation given by you that they must give some explanation and all that. Then the very surprising element is lost. If you don't know, there is nothing wrong in telling this House that you will go into those provisions and find out for yourself whether or not such provisions are there. That is why, Mr. Deve Gowda said that you make a detailed statement on the question he raised. Take your own time but before the end of the Session, you can do so. Therefore, if

you are not familiar with the provisions of the Act, it is better not to hazard any opinion upon it but I say and assert that the Karnataka Sales Tax Act does provide and empower the Department to make a surprise inspection without giving any notice to any distillery and in this case. the Excise Department, which is the left hand, there is a struggle between left and right hand, people act as henchmen of the Managing Director of the Gemini Distilleries Private Limited, Tumkur Road. That is the summum bonum of the allegation. Please go through that letter from the departmental files and if you have any tears to shed, please shed them afterwards and if not now.

ಶ್ರೀ ಆರ್.ಎಸ್ ಪಾಟೀಲ್.—ನಾನು ನೀವು ಹೇಳಿದಂಥಾ ವಾದವನ್ನು ವಿರೋಧ ಮಾಡಲಿಲ್ಲಾ. ನಾನು ಅವನಿಗೆ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರ ಇಲ್ಲ ಎಂದು ಹೇಳಲಿಲ್ಲಾ. ಅವನಿಗೆ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರ ಇದ್ದಾಗ್ಯೂ ಕೂಡ ಅವನು ಅನುಸರಿಸತಕ್ಕಂಥಾ ಕ್ರಮ ತಪ್ಪಿದೆ. ತಮಗೆ ಹೇಳಬೇಕಾದರೆ ಪ್ರತಿಯೊಂದು ಡಿಸ್ಟಲರೀಸ್‌ನಲ್ಲೂ ಕೂಡ ಒಬ್ಬೊಬ್ಬ ಸೂಪರಿಂಟೆಂಡೆಂಟ್ ಇದ್ದಾರೆ ಇವನು ಹೋದ ಎರಡು ನಿಮಿಷದಲ್ಲಿ ಅಂತ ದೊಡ್ಡ ಅನಾಹುತ ಏನೂ ಆಗುವುದಿಲ್ಲ. ಅವನು ಹೇಳ ಬೇಕಾಗಿತ್ತು, ನಾನು ಇನ್‌ಸ್ಪೆಕ್ಷನ್‌ಗೆ ಬಂದಿದ್ದೇನೆ ಎಂದು ಪತ್ರ ತೋರಿಸಿ ಅವರ ಪರ್ಮಿಷನ್ ಕೇಳಬೇಕಾಗಿತ್ತು. ಅವನು ಹೀಗೆ ಹೇಳದೇ ಹೋದದ್ದರಿಂದ ಈ ಒಂದು ಲ್ಯಾಕೂನಾದಿಂದ ಅವನು ಲಾಭ ಪಡೆದಿದ್ದಾನೇ ಹೊರತು ಅವರು ಇದರ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ನಾನು ಹೇಳಲಿಲ್ಲಾ.

MR. SPEAKER.—You can just go into it and make a statement.

SRI S. R. BOMMAI.—All incriminating documents were removed in their presence on the call of the Managing Director, Sri Basavaraj. In the presence of these Officers they were removed. I want to ask the Hon. Minister to study it and tell us what action has been taken instead of that, let him not surmise and come to a conclusion.

MR. SPEAKER.—Let him probe in the matter.

SRI S. R. BOMMAI.—Before the end of the Session, we want the Hon. Minister to make a statement in this regard.

ಕಾರ್ಮಿಕ ಇಲಾಖೆಯಿಂದ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಸಮಿತಿಯನ್ನು ಮಾಡಲಾಗಿದೆ. ಆ ಸಮಿತಿಯಲ್ಲಿ ಸ್ಥಳೀಯ ಶಾಸಕರನ್ನು, ಕಾರ್ಮಿಕ ಮುಖಂಡರನ್ನು ಮತ್ತು ಸ್ಥಳೀಯ ಉದ್ದಿಮೆ ಪ್ರತಿನಿಧಿಗಳನು ಹಾಕುವುದು ನಿಯಮ. ಆದರೆ, ಈಗ ಮಾಡಿರುವ ಸಮಿತಿಯಲ್ಲಿ ಹುಬ್ಬಳ್ಳಿಯಲ್ಲಿರುವ ಸ್ಥಳೀಯ ವಿರೋಧ ಪಕ್ಷದ ಶಾಸಕರೊಬ್ಬರನ್ನೂ ಹಾಕಿಲ್ಲ. ಆದರೆ, ಸೋತ ಅಭ್ಯರ್ಥಿಗಳನ್ನು ಅದರಲ್ಲಿ ಹಾಕಲಾಗಿದೆ. ಬೆಂಗಳೂರು ನಗರದಿಂದ ೯ ಜನ ನಮ್ಮ ಶಾಸಕರು ಆರಿಸಿ ಬಂದಿದ್ದಾರೆ. ಅವರಲ್ಲಿ ಒಬ್ಬರನ್ನೂ ಈ ಸಮಿತಿಗೆ ಹಾಕಿಲ್ಲ. ಹಾಗೆಯೇ, ಮೈಸೂರಿನಲ್ಲೂ ಹಾಕಿಲ್ಲ. ವಿಜಾಪುರದಲ್ಲಿ ಮಾನ್ಯ ಅರಕೇರಿಯವರನ್ನು ಬಿಟ್ಟರೆ ಬೇರೆ ಯಾರನ್ನೂ ಹಾಕಿಲ್ಲ. ಕಾರ್ಮಿಕ ನಾಯಕ ಶ್ರೀ ಫರ್ನಾಂಡೀಸ್ ಅವರನ್ನೂ ಈ ಸಮಿತಿಗೆ ಹಾಕಿಲ್ಲ; ಮತ್ತು ಉದ್ದಿಮೆಗಳಲ್ಲಿರುವ ಪ್ರತಿನಿಧಿಗಳಿಗೆ ಇಲ್ಲಿ ಸ್ಥಾನ ಕೊಟ್ಟಿಲ್ಲ. ಇದೊಂದು ಪ್ರಾಮುಖ್ಯವಾದ ಆಯ್ಕೆ ಸಮಿತಿಯಾಗಿದ್ದು, ಹಲವಾರು ಕೇಂದ್ರಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಒಂದೊಂದು ಕೇಂದ್ರದಲ್ಲಿ ಸುಮಾರು ೫೦೦-೬೦೦ ಜನ ಅಭ್ಯರ್ಥಿಗಳನ್ನು ಆರಿಸಲಾಗುತ್ತಿದೆ. ಅಂತಹ ಸಮಯದಲ್ಲಿ ಸ್ಥಳೀಯ ಶಾಸಕರು ಮತ್ತು ಕಾರ್ಮಿಕ ಮುಖಂಡರನ್ನು ಆ ಸಮಿತಿಯಲ್ಲಿ ಹಾಕಬೇಕಾಗಿತ್ತು. ಹಿಂದೆ ಇಂತಹ ಸಮಿತಿಗಳನ್ನು ಮಾಡುವಾಗ ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿ ಮಾಡಲಾಗುತ್ತಿತ್ತು. ಆದರೆ, ಈಗ ಆ ರೀತಿ

ಮಾಡಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಸರಿಯಾದ ಭರವಸೆ ಕೊಡದೆ ಹೋದರೆ ನಾವು ಅವರ ಇಲಾಖಾ ಬೇಡಿಕೆಯನ್ನು ವಿರೋಧಿಸಬೇಕಾಗುತ್ತದೆ ಮತ್ತು ಬೇರೆ ಕ್ರಮಗಳನ್ನೂ ಕೈಗೊಳ್ಳಬೇಕಾಗುತ್ತದೆ. ಆದುದರಿಂದ, ಮಾನ್ಯ ಸಚಿವರು ವಿವರಣೆ ಕೊಡಬೇಕೆಂದು ಪ್ರಾರ್ಥನೆ.

ಶ್ರೀ ಆರ್. ಎಸ್. ಪಾಟೀಲ್.—ಈ ವಿಚಾರವಾಗಿ ನಿನ್ನೆ ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಬಳಿ ಮಾತನಾಡಿದ್ದೇನೆ; ವಿವರಗಳನ್ನು ನಿನ್ನೆ ಅವರಿಗೆ ನೀಡಿದ್ದೇನೆ. ವಿರೋಧ ಪಕ್ಷದ ಸದಸ್ಯರಾರನ್ನೂ ಈ ಸಮಿತಿಗೆ ಹಾಕಿಲ್ಲವೆಂದು ಹೇಳುವುದು ಸರಿಯಲ್ಲ. ಮಾನ್ಯ ಆರ್ಮುಗಂ, ಮಾನ್ಯ ಶಾಮಣ್ಣನವರು ಮತ್ತು ಅರಕೇರಿಯವರನ್ನು ಈ ಸಮಿತಿಗಳಲ್ಲಿ ಹಾಕಲಾಗಿದೆ. ಆದರೆ, ಪ್ರತಿಯೊಂದು ಜಿಲ್ಲೆಯಲ್ಲೂ ಹಾಕಬೇಕೆಂದೇನಿಲ್ಲ. ಧಾರವಾಡದಲ್ಲಿ ಮಾನ್ಯ ಮುತ್ತಿನಪೆಂಡಿಮಠ ಅವರನ್ನು ಹಾಕಲಾಗಿದೆ. ಅಲ್ಲದೆ, ರೀ–ನೋಟಿಫಿಕೇಷನ್ ಮಾಡಿರುವುದರಲ್ಲಿ ೭–೮ ಜನ ವಿರೋಧ ಪಕ್ಷದ ಶಾಸಕರನ್ನು ಈ ಸಮಿತಿಯಲ್ಲಿ ಹಾಕಲಾಗಿದೆ. ಇನ್ನೂ ಹೆಚ್ಚು ಬೇಕಾದರೆ, ಮಾನ್ಯ ಮುಖ್ಯ ಮಂತ್ರಿಗಳನ್ನು ಒಪ್ಪಿಸಿ ಇವತ್ತೇ ನೋಟಿಫಿಕೇಷನ್ ಹೊರಡಿಸಿಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ ಹಾಗೆ ಈ ರಾಜ್ಯದಲ್ಲಿ ಒಬ್ಬರೇ ಮಂತ್ರಿಗಳಿದ್ದಾರೆ. ಇದು ನನಗೆ ಬಹಳ ಆಶ್ಚರ್ಯವನ್ನುಂಟು ಮಾಡುತ್ತಿದೆ. ಮಾನ್ಯ ಆರ್.ಎಸ್. ಪಾಟೀಲರು ಅಬ್ಕಾರಿ ಮತ್ತು ಕಾರ್ಮಿಕ ಸಚಿವರಾಗಿದ್ದಾರೆ; ಈ ಬಗ್ಗೆ ಅವರಿಗೆ ಸಂಪೂರ್ಣ ಅಧಿಕಾರವಿದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿ ನಾವು ನೋಟಿಫಿಕೇಷನ್ ಹೊರಡಿಸಿಕೊಳ್ಳಬೇಕೆಂದು ಮಾನ್ಯ ಸಚಿವರು ಹೇಳುತ್ತಿರುವ ಮಾತು ನಮಗೆ ವೇದನೆಯನ್ನುಂಟು ಮಾಡುತ್ತಿದೆ.

ಶ್ರೀ ಆರ್. ಎಸ್. ಪಾಟೀಲ್.—ಅಂತಿಮವಾಗಿ ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿಗೆ ನೀಡುವ ಅಧಿಕಾರವಿದೆ ಎನ್ನುವ ಅರ್ಥದಲ್ಲಿ ನಾನು ಆ ಮಾತನ್ನು ಹೇಳಿದೆ. ರೀ–ನೋಟಿಫಿಕೇಷನ್ ಮಾಡಿರುವುದರಲ್ಲಿ ೭–೮ ಜನ ವಿರೋಧ ಪಕ್ಷದ ಶಾಸಕರನ್ನು ಹಾಕಲಾಗಿದೆ. ಆ ನೋಟಿಫಿಕೇಷನ್‌ನ್ನು ಇವತ್ತು ಹೊರಡಿಸಲಾಗಿದೆ. ಅದರ ಪ್ರತಿಯೊಂದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅಧ್ಯಕ್ಷರ ಮೂಲಕ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂದು ಹೊರಡಿಸಿರುವ ನೋಟಿಫಿಕೇಷನ್ ವಿಚಾರ ನನಗೆ ಗೊತ್ತಿಲ್ಲ. ನಾನು, ನಿನ್ನೆಯವರೆಗಿದ್ದ ನೋಟಿಫಿಕೇಷನ್ ವಿಚಾರದಲ್ಲಿ ಮಾತನಾಡುತ್ತಿದ್ದೆ. ಆ ನೋಟಿಫಿಕೇಷನ್‌ನಲ್ಲಿ ಯಾರನ್ನೂ ಹಾಕಿಲ್ಲವೆಂದು ನಾನು ಹೇಳುತ್ತಿದ್ದೆ. ಇಂದು ಹೊರಡಿಸಿರುವ ನೋಟಿಫಿಕೇಷನ್‌ನಲ್ಲೂ, ಬೆಂಗಳೂರಿನಲ್ಲಿ ನಮ್ಮ ಪಕ್ಷದ ೯ ಜನ ಶಾಸಕರಿದ್ದರೂ ಮತ್ತು ಒಬ್ಬರು ಕಾರ್ಮಿಕ ಮುಖಂಡರಿದ್ದರೂ ಮಾನ್ಯ ಶಾಮಣ್ಣನವರ ಒಂದೇ ಹೆಸರನ್ನು ಇಲ್ಲಿ ಸೇರಿಸಲಾಗಿದೆ. ಹಾಗಾದರೆ ಬೆಂಗಳೂರಿಗೆ ಒಬ್ಬರೇ ಸಾಕೆ ? ಆದುದರಿಂದ, ಸರ್ಕಾರ ಸೂಕ್ತ ಪ್ರಾತಿನಿಧ್ಯ ವಿರೋಧ ಪಕ್ಷದ ಸದಸ್ಯರಿಗೆ ನೀಡುತ್ತದೆ ಎಂದು ತಾವು ಭರವಸೆ ಕೊಟ್ಟರೆ, ನಾನು ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಇದರ ಬಗ್ಗೆ ನಾವು ಸಮಾಲೋಚನೆ ಮಾಡೋಣ; ಬನ್ನಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈ ಸದನದಲ್ಲೇ, ಈಗಲೇ ಭರವಸೆ ನೀಡಬೇಕು. ವಿರೋಧಿ ಪಕ್ಷದ ಸದಸ್ಯರಿಗೆ ಈ ಸಮಿತಿಗಳಲ್ಲಿ ಯೋಗ್ಯ ಪ್ರಾತಿನಿಧ್ಯ ನೀಡಬೇಕು. ಯಾವ ಜಿಲ್ಲೆಗಳಲ್ಲಿ ನಾವು ಆರಿಸಿಬಂದಿಲ್ಲ; ಆ ಜಿಲ್ಲೆಗಳಲ್ಲಿ ನಾವು ಕೇಳುತ್ತಿಲ್ಲ. ಆದರೆ, ಆರಿಸಿ ಬಂದಿರುವ ಕಡೆ ಯೋಗ್ಯ ಪ್ರಾತಿನಿಧ್ಯ ನಾವು ಬಯಸುತ್ತಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—ತಮ್ಮ ಪಕ್ಷ ಆರಿಸಿ ಬರದಿರದ ಕಡೆಯೂ ನಾವು ತಮ್ಮ ಪಕ್ಷದ ಶಾಸಕರನ್ನು ಹಾಕಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಕಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಪಟ್ಟಿ ತರಿಸಿಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಚಿವರು ನಮ್ಮ ಪಕ್ಷದ ಶಾಸಕರಿಗೆ ಯೋಗ್ಯ ಪ್ರಾತಿನಿಧ್ಯ ಕೊಡುವುದಾಗಿ ಭರವಸೆ ಕೊಟ್ಟರೆ, ನಾನು ನಮ್ಮ ಕಡೆಯ ಶಾಸಕರ ಹೆಸರನ್ನು ಕೊಡುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಆಯ್ಕೆ ಸಮಿತಿ ಚಿಕ್ಕದಾಗಿರಬೇಕು; ಆದರೆ, ಅದೊಂದು ದೊಡ್ಡದಾಗಿ ಬಜಾರ್ ಆದರೆ ಅದು ಆಯ್ಕೆ ಸಮಿತಿಯಾಗುವುದಿಲ್ಲ. ಎಲ್ಲಿ ಅವಶ್ಯಕತೆ ಇದೆ ಎನ್ನುವುದನ್ನು ಚರ್ಚೆ ಮಾಡಿ, ಮಾಡೋಣ. ಮೂಗಿಗಿಂತ ಮೂಗುತಿ ಭಾರವಾಗುವುದು ಬೇಡ.

ಶ್ರೀ ಎಸ್.ಆರ್. ಬೊಮ್ಮಾಯಿ ;—ಎಲ್ಲಿ ಪ್ರಾತಿನಿಧ್ಯವಿಲ್ಲ ಅಲ್ಲಿ ಕೊಡುವುದಕ್ಕೆ ಒಪ್ಪುವಿರಾ?

ಶ್ರೀ ಆರ್.ಎಸ್. ಪಾಟೀಲ್;—ಆಗಲಿ.

MR, SPEAKER: I will put the Demand to the vote of the House. The question is,

> "That sums not exceeding the sums shown in the List of demands for grants including sums granted on account, be granted to the Government to defray the charges which will come in course of payment during the financial year ending 31st day of March 1979 in respect of Demand Nos. 21 & 58."

The motion was adopted and the sums were granted.

As ordered by the Chair the motion of Demands for grants adopted by the House are reproduced below.

DEMAND NO. 21.—STATE EXCISE

That a sum not exceeding Rs. 4,08,30,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 21 "State Excise".

DEMAND NO. 58—LABOUR AND EMPLOYMENT.

" That a sum not exceeding Rs. 3,23,93,000 Inclusive of the sum granted 'on account be granted to the Government to defray the charges which will come in course of payment during the fiinancial year ending 31st day of March 1979 in respect of Demand No. 58 'Labour and Employment".

Explantion of Certain remarks made by Sri S.S. Arakeri.

ಅಧ್ಯಕ್ಷರು :—ಮಾನ್ಯ ಎಸ್.ಎಸ್. ಅರಕೇರಿಯವರು ನಿಯಮ ೩೧೨ರ ಕೆಳಗೆ ಪ್ರಸ್ತಾವನೆಯನ್ನು ಮಂಡಿಸುತ್ತಾ * * * * ಎಂದು ಹೇಳಿದ್ದಾರೆ. ಮತ್ತು * * * * ಎಂದು ಹೇಳಿದ್ದಾರೆ ನಡವಳಿಕೆಯ ದೃಷ್ಟಿಯಿಂದ ಸಾಧುವಲ್ಲ. ಇದನ್ನು ದಾಖಲೆಯಿಂದ ತೆಗೆಯಲು ಆದೇಶ ನೀಡಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ :—ಮಾನ್ಯ ಆರ್.ಎಸ್. ಪಾಟೀಲರು ತಮ್ಮ ಉತ್ತರದಲ್ಲಿ ನನ್ನ ಭಾಷಣದಲ್ಲಿ ಉಲ್ಲೇಖಿಸಿದ್ದ ಆಗಿನ ಬೆಂಗಳೂರು ಜಿಲ್ಲಾಧಿಕಾರಿಯವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರದ ಬಗ್ಗೆ ಏನೂ ಹೇಳಲಿಲ್ಲ. ಆದುದರಿಂದ ಆ ವಿಚಾರವಾಗಿ ಅವರು ಈ ಅಧಿವೇಶನ ಮುಗಿಯುವುದರೊಳಗೆ ಈ ಸದನದಲ್ಲಿ ನೀಡುವ ಹೇಳಿಕೆಯಲ್ಲಿ ನಮೂದು ಮಾಡಬೇಕೆಂದು ಹೇಳುತ್ತೇನೆ.

---

* * * * Matter expunged as ordered by the Chair.